# ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

## ಕರ್ನಾಟಕ ಪಂಚಾಯತ್ ರಾಜ್ (ಘನ ತ್ಯಾಜ್ಯ ನಿರ್ವಹಣೆ) ಕರಡು ಮಾದರಿ ಉಪವಿಧಿಗಳು, 2019

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪರಿಚ್ಛೇದ 316 ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಘನ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ರ ಉಪಬಂಧಗಳೊಂದಿಗೆ ಚಲಾಯಿಸುತ್ತ ಕರ್ನಾಟಕ ಸರ್ಕಾರವು ಗ್ರಾಮ ಪಂಚಾಯತಿಗಳ ಭೌಗೋಳಿಕ ವ್ಯಾಪ್ತಿಯಲ್ಲಿ ಘನ ತ್ಯಾಜ್ಯವನ್ನು ವ್ಯವಹರಿಸುವ ಮತ್ತು ನಿರ್ವಹಿಸುವ ಉದ್ದೇಶಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ (ಘನತ್ಯಾಜ್ಯ ನಿರ್ವಹಣೆ) ಕರಡು ಮಾದರಿ ಉಪವಿಧಿಗಳನ್ನು ಪ್ರಸ್ತಾವಿಸಿದ್ದು, ಸದರಿ ಅಧಿನಿಯಮದ ಪರಿಚ್ಛೇದ 316 (1) ರಡಿಯಲ್ಲಿ ಅಗತ್ಯ ಪಡಿಸಿರುವಂತೆ ಅದನ್ನು ಈ ಮೂಲಕ ಪ್ರಕಟಿಸಲಾಗಿದೆ. ಇದು ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಮತ್ತು ಸದರಿ ಕರಡನ್ನು ಅದು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 30 (ಮೂವತ್ತು) ದಿವಸಗಳ ತರುವಾಯ ಪರಿಗಣಿಸಲಾಗುವುದೆಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಮೇಲೆ ನಿರ್ದಿಷ್ಟ ಪಡಿಸಿರುವ ಕಾಲಾವಧಿಯೊಳಗೆ ಯಾರೇ ವ್ಯಕ್ತಿಯಿಂದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ರಾಜ್ಯ ಸರ್ಕಾರದಿಂದ ಸ್ವೀಕೃತವಾದಲ್ಲಿ ಅವುಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಯುಕ್ತ ಪ್ರಾಧಿಕಾರದ ವಿಳಾಸಕ್ಕೆ ಕಳುಹಿಸಬಹುದು **(ಹೆಸರು, ವಿಳಾಸ ಮತ್ತು ಯುಕ್ತ ಪ್ರಾಧಿಕಾರದ ಇ ಮೇಲ್ ವಿಳಾಸ)**

## ಅಧ್ಯಾಯ 1 – ಸಾಮಾನ್ಯ

### 1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯಿಕೆ

1.1. ಇವುಗಳು ಕರ್ನಾಟಕ ಪಂಚಾಯತ್ ರಾಜ್ (ಘನ ತ್ಯಾಜ್ಯ ನಿರ್ವಹಣೆ) ಮಾದರಿ 2019 ರ ಉಪವಿಧಿಗಳಾಗಿದ್ದು, ಅಧಿಕೃತವಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಅನುಷ್ಠಾನಕ್ಕೆ ಬರತಕ್ಕದ್ದು.

1.2. ಈ ಉಪ–ವಿಧಿಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರಡಿಯಲ್ಲಿ ವಿಧಿಸಲಾಗಿರುವ ವಿಧಿವಿಧಾನಗಳನ್ವಯ ಜಾರಿಗೆ ಬರತಕ್ಕದ್ದು.

### 2. ಪರಿಭಾಷೆಗಳು

**(1)** ಈ ಉಪವಿಧಿಗಳಲ್ಲಿ ಇನ್ನಾವುದೇ ಪ್ರಾಸಂಗಿಕ ಸನ್ನಿವೇಶವು ಅಪೇಕ್ಷಿಸದ ಸಂದರ್ಭದಲ್ಲಿ –

2.1. **'ಅಧಿನಿಯಮ'** ಎಂದರೆ ಕಾಲಕಾಲಕ್ಕೆ ತಿದ್ದುಪಡಿಯಾಗಬಹುದಾದ ಕರ್ನಾಟಕ ಪಂಚಾಯತ್ ರಾಜ್ಯ ಅಧಿನಿಯಮ, 1993.

2.2. **'ಏಜೆನ್ಸಿ'** ಎಂದರೆ ಗ್ರಾಮ ಪಂಚಾಯತಿಯಿಂದ ನೇಮಕ ಹೊಂದಿದ ಅಥವಾ ಪ್ರಾಧೀಕರಿಸಲಾದ ಅಥವಾ ರಾಜ್ಯ ಸರ್ಕಾರದಿಂದ ಗ್ರಾಮಪಂಚಾಯತಿಯ ಪರವಾಗಿ ಒಂದು ಕರಾರಿನ ಮೂಲಕ ಈ ಉಪವಿಧಿಗಳನ್ವಯ ಕರ್ತವ್ಯಗಳು ಅಥವಾ ಕಾರ್ಯವನ್ನು ನಿರ್ವಹಿಸಿ ಕ್ರಮ ವಹಿಸುವಂತೆ ನಿರ್ದೇಶಿತವಾಗಿರುವ ತ್ಯಾಜ್ಯ ಸಂಗ್ರಹಿಸುವವರು ಅಥವಾ ತ್ಯಾಜ್ಯ ವ್ಯಾಪಾರಿಗಳನ್ನೊಳಗೊಂಡಂತೆ ನೋಂದಣಿಯಾದ ಯಾವುದೇ ಸಂಘಟನೆಯನ್ನು ಒಳಗೊಂಡಂತೆ ಯಾವುದೇ ವ್ಯಕ್ತಿ ಅಥವಾ ಯಾವುದೇ ಸಂಸ್ಥೆ.

2.3. **'ಜೈವಿಕ ವಿಘಟಿತ ತ್ಯಾಜ್ಯ'** ಎಂದರೆ ಸೂಕ್ಷ್ಮ ಜೀವಿಗಳಿಂದ (micro-organisms) ಸರಳ ಸ್ಥಿರ ಸಂಯುಕ್ತ ವಸ್ತುಗಳಾಗಿ ವಿಘಟಿತವಾಗುವ ಜೈವಿಕ ವಸ್ತು. ಇದರ ದೃಷ್ಟಾಂತದ ಪಟ್ಟಿಯನ್ನು **ಅನುಸೂಚಿ –1 ರ ಭಾಗ** (ಎ) **ರಲ್ಲಿ ನಿರ್ದಿಷ್ಟ ಪಡಿಸಲಾಗಿದೆ.**

2.4. **'ಜೈವಿಕ–ವೈದ್ಯಕೀಯ ತ್ಯಾಜ್ಯ'ವು** ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮಗಳಲ್ಲಿ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

2.5. **'ಕಟ್ಟಡಗಳು'** ಎಂದರೆ ಘನತ್ಯಾಜ್ಯವನ್ನು ಉತ್ಪಾದಿಸುವಂತಹ ಸಂಚಾರಿ ಅಥವಾ ಸ್ಥಿರವಾದ ಯಾವುದೇ ತಾತ್ಕಾಲಿಕ ಅಥವಾ ಖಾಯಂ ನಿರ್ಮಾಣವಾದ ಕಟ್ಟಡ.

2.6. **ಬೃಹತ್ ತ್ಯಾಜ್ಯೋತ್ಪಾದಕ'** ಎಂದರೆ

(i) ಕೇಂದ್ರ ಸರ್ಕಾರಿ ಇಲಾಖೆಗಳು ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ರಾಜ್ಯ ಸರ್ಕಾರಿ ಇಲಾಖೆಗಳು ಅಥವಾ ಸ್ವಾಮ್ಯದ ಸಂಸ್ಥೆಗಳು, ಗ್ರಾಮ ಪಂಚಾಯತಿ, ಮಾರುಕಟ್ಟೆ ಸಂಘಗಳು, ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು, ಶಾಲೆಗಳು ಮತ್ತು ಕಾಲೇಜುಗಳು, ವಿದ್ಯಾರ್ಥಿ ನಿಲಯಗಳು, ಹೋಟೆಲುಗಳು, ಉಪಹಾರ ಮಂದಿರಗಳು, ಅಂಗಡಿಗಳು, ವಾಸದ ಮನೆಗಳು, ವಾಣಿಜ್ಯ ಸ್ಥಾಪನೆಗಳು, ಪೂಜಾ ಸ್ಥಳಗಳು, ಕಲ್ಯಾಣ ಮಂಟಪಗಳು, ರೈಲು ನಿಲ್ದಾಣಗಳು, ಬಸ್ ನಿಲ್ದಾಣಗಳು ಇತ್ಯಾದಿಗಳನ್ನು ಪ್ರತಿಯೊಂದೂ ಸಹ ದಿನವೊಂದಕ್ಕೆ ಸರಾಸರಿ 50 ಕೆಜಿ ಅಥವಾ ಅದಕ್ಕೂ ಹೆಚ್ಚು ಘನ ತ್ಯಾಜ್ಯವನ್ನು ಉತ್ಪಾದಿಸುವಂತಹ ಸ್ಥಳಗಳನ್ನು ; ಮತ್ತು

(ii) ಈ ಉಪವಿಧಿಗಳನ್ವಯ ಕಾಲಕಾಲಕ್ಕೆ ಗ್ರಾಮಪಂಚಾಯತಿಯಿಂದ ಅನುಸೂಚಿಸಲಾಗುವ ಇತರ ಯಾವುದೇ ತ್ಯಾಜ್ಯೋತ್ಪಾದಕನನ್ನು ಒಳಗೊಳ್ಳುತ್ತದೆ

2.7. **'ಉಪ–ವಿಧಿಗಳು'** ಎಂದರೆ ಕರ್ನಾಟಕ ಪಂಚಾಯತ್ ರಾಜ್ (ಘನ ತ್ಯಾಜ್ಯ ನಿರ್ವಹಣಾ) ಮಾದರಿ ಉಪ–ವಿಧಿಗಳು, 2019, ಗ್ರಾಮ ಪಂಚಾಯತಿಗಳು ಕಾಲಕಾಲಕ್ಕೆ ತಿದ್ದುಪಡಿಯಾದಂತೆ;

2.8. **ಮುಖ್ಯ ಕಾರ್ಯ ನಿರ್ವಹಣಾಧಿಕಾರಿ'**ಯು ಅಧಿನಿಯಮದಲ್ಲಿ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

2.9. **'ಸಮೂಹ' (ಗುಂಪು)'** ಎಂದರೆ ಘನ ತ್ಯಾಜ್ಯ ನಿರ್ವಹಣಾ ಸಂಸ್ಕರಣೆಯು ವ್ಯಾಪಿಸುವ ಸಲುವಾಗಿ ಭೌಗೋಳಿಕವಾಗಿ ಪರಸ್ಪರ ಒಟ್ಟುಗೂಡಿರುವ ಎರಡು ಅಥವಾ ಹೆಚ್ಚಿನ ಗ್ರಾಮ ಪಂಚಾಯತಿಗಳು

2.10 **'ಸಮಿತಿಗಳು'** ಎಂದರೆ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಗಳು ಮತ್ತು ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಆಹಾರ ಸಮಿತಿಗಳು.

2.11. **'ಸಿಪಿಸಿಬಿ'** ಎಂದರೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ

2.12. **ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯ'** ಎಂದರೆ ಕೆಲವು ಸಂದರ್ಭಗಳಲ್ಲಿ ಬೆಂಕಿ ಹೊತ್ತಿಕೊಳ್ಳುವ, ಕಲುಷಿತಗೊಳ್ಳುವ, ಅಥವಾ ಸ್ಫೋಟಿಸುವ ಅಥವಾ ವಿನಾಶಕಾರಿ (corrosive) ಅಥವಾ ವಿಷಕಾರಿಯಾಗಬಹುದಾದ ಗೃಹೋತ್ಪಾದಿತ ತ್ಯಾಜ್ಯ ಇದರ ದೃಷ್ಟಾಂತದ ಪಟ್ಟಿಯನ್ನು ಅನುಸೂಚಿ 1 ರ ಭಾಗ (ಸಿ) **ಯಲ್ಲಿ** ನೀಡಲಾಗಿದೆ.

2.13. **'ಮನೆ ಬಾಗಿಲಿನಿಂದ ಸಂಗ್ರಹಣೆ'** ಎಂದರೆ ವಾಸದ ಮನೆಗಳು, ಅಂಗಡಿಗಳು, ವಾಣಿಜ್ಯ ಸ್ಥಾಪನೆಗಳು, ಕಚೇರಿಗಳು, ಸಾಂಸ್ಥಿಕ ಅಥವಾ ತ್ಯಾಜ್ಯೋತ್ಪಾದಕರುಗಳು ಸ್ವಾಧೀನಾನುಭವವನ್ನು ಹೊಂದಿರುವ ಇತರ ಯಾವುದೇ ಆವರಣಗಳ ಬಾಗಿಲಿನಿಂದಲೇ ಘನ ತ್ಯಾಜ್ಯ ಸಂಗ್ರಹಣೆ.

2.14. **'ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ ಅಥವಾ ಡಿಡಬ್ಲ್ಯೂಸಿಸಿ'** ಎಂದರೆ ಗ್ರಾಮ ಪಂಚಾಯಿತಿಗಳಿಂದ ಮತ್ತು/ಅಥವಾ ಏಜೆನ್ಸಿಯಿಂದ ನಿರ್ವಹಿಸಲ್ಪಡುವಂತಹ ಜೈವಿಕ ಅವಿಘಟಿತ ತ್ಯಾಜ್ಯ ಸಂಗ್ರಹಣೆ, ದಾಸ್ತಾನು ಮಾಡುವಿಕೆ ವಿಂಗಡಣೆ ಮತ್ತು ನಿರ್ವಹಣೆಯ ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣಾ ಸೌಲಭ್ಯ ಕೇಂದ್ರ.

2.15. **'ಇ–ತ್ಯಾಜ್ಯ'**ವು ಇ–ತ್ಯಾಜ್ಯ ನಿರ್ವಹಣಾ ನಿಯಮಗಳು, 2016ರಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

2.16. **'ನಿರ್ವಹಣಾಧಿಕಾರಿ'** ಎಂಬ ಪದವು ಅಧಿನಿಯಮದಲ್ಲಿ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

2.17. **'ಸರ್ಕಾರ'**ವು ಅಧಿನಿಯಮದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

2.18. **'ಗ್ರಾಮ ಪಂಚಾಯತಿ'**ಯು ಅಧಿನಿಯಮದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

2.19 **'ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ'** ಎಂದರೆ ಗ್ರಾಮ ಪಂಚಾಯತಿಯಲ್ಲಿ ಅಧಿನಿಯಮದ ಪ್ರಕರಣ 309 ರನ್ವಯ ಹಾಗೂ ಅಧಿನಿಯಮದ ಇತರ ಅನ್ವಯವಾಗುವಂತಹ ಉಪಬಂಧಗಳನ್ವಯ ರೂಪಿಸಲಾದ ಅಭಿವೃದ್ಧಿ ಯೋಜನೆ.

2.20 **'ಕೆಎಸ್‌ಪಿಸಿಬಿ'** ಎಂದರೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ

2.21. **'ಮಾರುಕಟ್ಟೆ ಸಂಘ'** ಎಂದರೆ ಮಾರಾಟಗಾರರ, ಅಂಗಡಿ ಮಾಲೀಕರುಗಳು, ಅಂಗಡಿ ನಡೆಸುವವರ, ವ್ಯಾಪಾರಿಗಳ, ವ್ಯವಹಾರ ನಡೆಸುವವರ, ನಿರ್ವಹಣೆ ಮಾಡುವವರ, ವ್ಯಾಪಾರೋದ್ಯಮಿಗಳ, ನೀಡುವವರ, ದಳ್ಳಾಳಿಗಳ ಅಥವಾ ನಿರ್ದಿಷ್ಟ ಮಾರುಕಟ್ಟೆ ಅಥವಾ ಸ್ಥಳೀಯ ಪ್ರದೇಶದ ಇತರ ವ್ಯಕ್ತಿಗಳನ್ನೊಳಗೊಂಡ ನೋಂದಾಯಿತ ಅಥವಾ ನೋಂದಣಿರಹಿತ ಗುಂಪು ಅಥವಾ ಸಂಘ.

2.22. **ಜೈವಿಕ ಅವಿಘಟಿತ ತ್ಯಾಜ್ಯ'** ಎಂದರೆ ಯಾವುದೇ ಸೂಕ್ಷ್ಮ ಜೀವಿಗಳಿಂದ ಸರಳ ಸ್ಥಿರ ಸಂಯುಕ್ತ ವಸ್ತುಗಳಾಗಿ ವಿಘಟಿತವಾಗದಂತಹ ಯಾವುದೇ ಘನ ತ್ಯಾಜ್ಯ.

2.23. **'ಪಂಚಾಯತಿ ಅಭಿವೃದ್ಧಿ ಅಧಿಕಾರಿ'**ಯು ಅಧಿನಿಯಮದಲ್ಲಿ ಅದಕ್ಕೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

2.24. **'ವ್ಯಕ್ತಿ'**ಯು ನಿಗಮಿತ ಅಥವಾ ನಿಗಮಿತವಲ್ಲದ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ.

2.25. **'ಸ್ಥಳದಿಂದ ಸ್ಥಳದಲ್ಲಿ ಸಂಗ್ರಹಣೆ'** ಎಂದರೆ ವಿಂಗಡಣೆ ಮಾಡಲಾದ ಘನ ತ್ಯಾಜ್ಯವು ತ್ಯಾಜ್ಯೋತ್ಪಾದಕನಿಂದ ಅಂತಹ ಸ್ಥಳಗಳು ಮತ್ತು ದಾಸ್ತಾನು ಮಾಡುವ ಸ್ಥಳಗಳಲ್ಲಿ ಇರಿಸಲಾಗುವುದು ಮತ್ತು ಅವುಗಳು ಗ್ರಾಮ ಪಂಚಾಯತಿಯಿಂದ ಅಥವಾ ಏಜೆನ್ಸಿಯಿಂದ ಒದಗಿಸಲಾದ ಮುಂದಿನ ಬಟವಾಡೆ ಸ್ಥಳಕ್ಕೆ ಒಯ್ಯುವ ವ್ಯವಸ್ಥೆ.

2.26 **'ಆವರಣಗಳು'** ಎಂದರೆ ಯಾವುದೇ ಕಟ್ಟಡ ಅಥವಾ ಕಟ್ಟಡದ ಒಂದು ಭಾಗ ಮತ್ತು ಇದರಲ್ಲಿ ಕಟ್ಟಡಕ್ಕೆ ಅಥವಾ ಅದರ ಭಾಗಕ್ಕೆ ಹೊಂದಿಕೊಂಡಿರುವಂತಹ ಯಾವುದೇ ಉದ್ಯಾನವನಗಳು ಮತ್ತು ಮೈದಾನವನ್ನು ಮತ್ತು ಸದರಿ ಭೂಮಿಯಲ್ಲಿ(ಜಮೀನು) ನಿರ್ಮಾಣ ಮಾಡಿರುವಂತಹ ವಾಸದ ಮನೆ, ವ್ಯಾಪಾರ, ಕೈಗಾರಿಕೆಗಳು, ವ್ಯವಹಾರ, ಸಾರ್ವಜನಿಕ ಅಥವಾ ಇತರ ಯಾವುದೇ ಖಾಸಗಿ ಉದ್ದೇಶಗಳಿಗಾಗಿ, ವಿವಾಹ, ಸಭೆಗಳು, ವಸ್ತು ಪ್ರದರ್ಶನಗಳು ಮತ್ತು ಸಮಾರಂಭಗಳ ಸಂಘಟನೆ ಇತ್ಯಾದಿಗಳನ್ನು ಒಳಗೊಂಡಂತೆ ಯಾವುದೇ ಕಟ್ಟಡವನ್ನು ಒಳಗೊಳ್ಳುತ್ತದೆ.

2.27 **'ತೊಟ್ಟಿ' ಅಥವಾ ಬುಟ್ಟಿ'** ಎಂದರೆ ಯಾವುದೇ ವರ್ಗದ ಘನತ್ಯಾಜ್ಯವನ್ನು ದಾಸ್ತಾನು ಮಾಡಲು ಬಳಕೆ ಮಾಡುವಂತಹ ಬುಟ್ಟಿಗಳು ಅಥವಾ ಚೀಲಗಳನ್ನು ಒಳಗೊಂಡಿರುವಂತಹ ಧಾರಕಗಳು.

2.28 **'ಪುನರಾವರ್ತಿಸಬಹುದಾದ ಜೈವಿಕ ಅವಿಘಟಿತ ತ್ಯಾಜ್ಯ'** ಎಂದರೆ ಸಂಸ್ಕರಣೆಗಳ ಮೂಲಕ ನೂತನ ಉತ್ಪನ್ನಗಳನ್ನು ಉತ್ಪಾದಿಸುವ ಸಲುವಾಗಿ, ಸಂಸ್ಕರಣೆಯ ಮೂಲಕ ಕಚ್ಚಾ ವಸ್ತುಗಳಾಗಿ ಪರಿವರ್ತಿಸಬಹುದಾದ ಜೈವಿಕ ಅವಿಘಟಿತ ತ್ಯಾಜ್ಯ. ಮತ್ತು ಈ ಉತ್ಪನ್ನಗಳು ಮೂಲ ಉತ್ಪನ್ನಗಳ ರೀತಿಯಲ್ಲಿಯೇ ಇರಬಹುದು ಅಥವಾ ಇರದಿರಲೂ ಬಹುದು. ಇದರ ದೃಷ್ಟಾಂತ ಪಟ್ಟಿಯನ್ನು **ಅನುಸೂಚಿ 1 ರ ಭಾಗ (ಬಿ)ಯಲ್ಲಿ** ನೀಡಲಾಗಿದೆ.

2.29. **'ನೈರ್ಮಲ್ಯ ಪ್ರೇರಕ (ಉತ್ತೇಜಕ)'** ಎಂದರೆ ಗ್ರಾಮ ಪಂಚಾಯತಿಯಿಂದ ಭಾರತ ಸರ್ಕಾರದಿಂದ ಹೊರಡಿಸಲಾದ ಸ್ವಚ್ಛಾಗ್ರಹಿ ಮಾರ್ಗಸೂಚಿಗಳು, 2018 ರಡಿಯಲ್ಲಿ ಮತ್ತು/ಅಥವಾ ಇತರ ಯಾವುದೇ ತದನಂತರದ ಅನ್ವಯವಾಗುವಂತಹ ವಿನಿಯಮಗಳಡಿಯಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನೈರ್ಮಲ್ಯ ಸಂಬಂಧಿ ಕಾರ್ಯಚಟುವಟಿಕೆಗಳಿಗಾಗಿ ನೇಮಕ ಹೊಂದಿರುವ ವ್ಯಕ್ತಿ.

2.30. **'ನೈರ್ಮಲ್ಯ ಭೂ ಭರ್ತಿ'** ಎಂದರೆ ಅಂತರ್ಜಲ, ಮೇಲ್ಮೈ ನೀರು, ವಾಯುವಿನಲ್ಲಿ ಬೆರೆಯುವ ಧೂಳು ಕಣ, ಗಾಳಿ ಬೀಸುವ ಮೂಲಕ ಹರಡುವ ಕಸ, ದುರ್ವಾಸನೆ, ಅಗ್ನಿ ಅವಘಡಗಳ ಅಪಾಯ, ಪ್ರಾಣಿ ತ್ಯಾಜ್ಯ ಭೀತಿ, ಪಕ್ಷಿ ತ್ಯಾಜ್ಯ ಭೀತಿ, ಕೀಟ ನಾಶಕಗಳು ಅಥವಾ ದಂಶಕಗಳು (rodents), ಹಸಿರು ಮನೆ ಅನಿಲ ಹೊರಸೂಸುವಿಕೆ, ನಿರಂತರ ಜೈವಿಕ ಮಾಲಿನ್ಯಗಳು ಇಳಿಜಾರು ಅಸ್ಥಿರತೆಯಂತಹ ಮಾಲಿನ್ಯಗಳನ್ನು ನಿಬಂಧಿಸುವ ವಿವಿಧ ಅನ್ವಯವಾಗುವ ವಿನಿಯಮಗಳಡಿಯಲ್ಲಿ ವಿನ್ಯಾಸಗೊಳಿಸಿರುವಂತಹ ಉಳಿಕೆ ಘನತ್ಯಾಜ್ಯದ ಮತ್ತು ಜಡ ತ್ಯಾಜ್ಯದ ಅಂತಿಮ ಮತ್ತು ಸುರಕ್ಷಿತ ವಿಲೇವಾರಿ ಸೌಲಭ್ಯ ಕೇಂದ್ರಗಳು.

2.31. **'ಸ್ಯಾನಿಟರಿ ತ್ಯಾಜ್ಯ'** ಎಂದರೆ ಬಳಕೆ ಮಾಡಲಾದ ಡೈಪರುಗಳು, ನೈರ್ಮಲ್ಯ ಟವಲುಗಳು ಅಥವಾ ನ್ಯಾಪ್‌ಕಿನ್ನುಗಳು, ಋತುಸ್ರಾವ ಬಟ್ಟೆಗಳು ಮತ್ತು ಸ್ವಚ್ಛತಾ ಕಪ್ಪುಗಳು, ಅಸಂಯಮ ಹಾಳೆ, ಸ್ರಾವವನ್ನು ಹೀರುವ ಬಟ್ಟೆ(tampons), ಗರ್ಭನಿರೋಧಕ ರಬ್ಬರು ಚೀಲ, ಕಿವಿ ಸ್ವಚ್ಛಗೊಳಿಸುವ ಹತ್ತಿಯ ಸಾಧನ, ಶೌಚ ಕಾಗದ, ಹತ್ತಿಯ ಉಂಡೆಗಳು, ಮನೆಗಳ ಸಿರೆಂಜುಗಳು ಮತ್ತಿತರ ಅದೇ ಮಾದರಿಯ ತ್ಯಾಜ್ಯಗಳನ್ನು ಒಳಗೊಳ್ಳುತ್ತವೆ.

2.32 **'ಘನತ್ಯಾಜ್ಯ'** ಎಂದರೆ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಉತ್ಪಾದಿತವಾದ ಘನ ಅಥವಾ ಅರೆ ಘನ ಗೃಹೋತ್ಪಾದಿತ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ, ವಾಣಿಜ್ಯ ತ್ಯಾಜ್ಯ, ಸಾಂಸ್ಥಿಕ ತ್ಯಾಜ್ಯ, ಆಹಾರ ಒದಗಿಸುವ ಮತ್ತು ತ್ಯಾಜ್ಯ ಮಾರುಕಟ್ಟೆ ತ್ಯಾಜ್ಯ ಮತ್ತು ಇತರ ವಾಸದ ಮನೆ ರಹಿತ ತ್ಯಾಜ್ಯ, ಬೀದಿ ಕಸ ಗುಡಿಸಿದ ತ್ಯಾಜ್ಯ, ಮೇಲ್ಪದರದ ಚರಂಡಿಗಳಿಂದ ತೆಗೆದ ಕೆಸರು ತ್ಯಾಜ್ಯ, ತೋಟಗಳಿಂದ ಉತ್ಪಾದಿತವಾದ ತ್ಯಾಜ್ಯ, ಕೃಷಿ ತ್ಯಾಜ್ಯ, ಕೈಗಾರಿಕಾ ತ್ಯಾಜ್ಯಗಳನ್ನು ಹೊರತು ಪಡಿಸಿದ ಜೈವಿಕ ವೈದ್ಯಕೀಯ ತ್ಯಾಜ್ಯ–ಇ–ತ್ಯಾಜ್ಯ, ಬ್ಯಾಟರಿ ತ್ಯಾಜ್ಯ, ಮತ್ತು ವಿಕಿರಣ ಶೀಲ ತ್ಯಾಜ್ಯ (Radio active waste)

2.33. **'ಬೀದಿ ಕಸ ಗುಡಿಸುವಿಕೆ'** ಎಂದರೆ ಸಾರ್ವಜನಿಕ ಬೀದಿಗಳು, ಉದ್ಯಾನವನಗಳು ಮತ್ತು ಸಾರ್ವಜನಿಕ ಪ್ರದೇಶಗಳ ಕಸ ಗುಡಿಸುವ ಮೂಲಕ ಸಂಗ್ರಹಿಸಲಾದ ಮತ್ತು ಮೇಲ್ಪದರ ಚರಂಡಿಗಳು/ಸಾರ್ವಜನಿಕ ರಸ್ತೆಗಳಿಗೆ ಹೊಂದಿಕೊಂಡಿರುವ ಗುಂಡಿಗಳು (ಕಂದಕಗಳು) ಮತ್ತಿತರ ಸಂಬಂಧಿತ ಕಾರ್ಯಚಟುವಟಿಕೆಗಳ ಮೂಲಕ ಸಂಗ್ರಹಿಸಲಾಗುವ ಘನ ತ್ಯಾಜ್ಯ.

2.34. **'ಎಸ್‌ಡಬ್ಲ್ಯೂಎಂ ನಿಯಮಗಳು' ಎಂದರೆ** ಕಾಲಕಾಲಕ್ಕೆ ತಿದ್ದುಪಡಿ ಮಾಡಬಹುದಾದ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು, 2016.

2.35. **'ಎಸ್‌ಡಬ್ಲಯುಎಂ ಬಳಕೆದಾರರ ಶುಲ್ಕ'** ಎಂದರೆ ಘನ ತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ, ಮತ್ತು ವಿಲೇವಾರಿ ಸೇವೆಗಳನ್ನು ಒದಗಿಸುವ ಸಲುವಾಗಿ ಉಂಟಾಗುವ ವೆಚ್ಚವೆಚ್ಚದ ಪೂರ್ಣ ಭಾಗ ಅಥವಾ ಅದರ ಭಾಗವನ್ನು ವ್ಯಾಪಿಸುವ ಸಲುವಾಗಿ ಗ್ರಾಮ ಪಂಚಾಯತಿಯಿಂದ ಅಥವಾ ಏಜೆನ್ಸಿಯಿಂದ ತ್ಯಾಜ್ಯೋತ್ಪಾದಕನ ಮೇಲೆ ಈ ಉಪವಿಧಿಗಳನ್ವಯ ವಿಧಿಸುವಂತಹ ಶುಲ್ಕ.

2.36. **'ತ್ಯಾಜ್ಯೋತ್ಪಾದಕ'** ಎಂದರೆ ಘನತ್ಯಾಜ್ಯವನ್ನು ಉತ್ಪಾದಿಸುವಂತಹ ಪ್ರತಿಯೊಂದು ಕಟ್ಟಡ, ವಾಸದ ಮನೆಯ ಆವರಣ ಮತ್ತು ವಾಸೇತರ ಆವರಣಗಳು, ಭಾರತೀಯ ರೈಲ್ವೆ, ರಕ್ಷಣಾ ಇಲಾಖೆಯನ್ನೂ ಒಳಗೊಂಡಂತೆ ಪ್ರತಿಯೊಂದು ಕಟ್ಟಡವನ್ನೂ ಸಹ ಒಳಗೊಳ್ಳುತ್ತದೆ.

**2.37 'ತ್ಯಾಜ್ಯ ಆಯುವವನು'** ಎಂದರೆ, ಜೈವಿಕ ಅವಿಘಟಿತ ತ್ಯಾಜ್ಯವನ್ನು ತ್ಯಾಜ್ಯೋತ್ಪಾದನಾ ಮೂಲಗಳಿಂದ, ಬೀದಿಗಳಿಂದ, ತೊಟ್ಟಿಗಳಿಂದ, ತಿಪ್ಪೆ ರಾಶಿಗಳಿಂದ, ಸಾರ್ವಜನಿಕ ಪ್ರದೇಶಗಳು ಇತ್ಯಾದಿಗಳಿಂದ ಮಾರಾಟಕ್ಕಾಗಲೀ ಅಥವಾ ಪುನರಾವರ್ತಿತರಿಗಾಗಲೀ ನೇರವಾಗಿ ಅಥವಾ ತ್ಯಾಜ್ಯ ವ್ಯಾಪಾರಿಗಳಂತಹ ಮಧ್ಯವರ್ತಿಗಳ ಮೂಲಕ ತಮ್ಮ ಜೀವನೋಪಾಯಕ್ಕಾಗಿ ಮಾರಾಟ ಮಾಡುವ ಅನೌಪಚಾರಿಕ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹಗಳು.

2.38. **'ತ್ಯಾಜ್ಯ ಕಾರ್ಯನಿರ್ವಾಹಕ'** ಎಂದರೆ ಗ್ರಾಮ ಪಂಚಾಯಿತಿಯಿಂದಾಗಲೀ ಅಥವಾ ಏಜೆನ್ಸಿಯ ಮೂಲಕವಾಗಿ ನೇರವಾಗಿ ಅಥವಾ ಪರೋಕ್ಷವಾಗಿ ನೇಮಕಗೊಂಡಿರುವಂತಹ ಮತ್ತು

(i) ಚರಂಡಿ ಸ್ವಚ್ಛಗೊಳಿಸುವುದನ್ನೂ ಒಳಗೊಂಡಂತೆ ಬೀದಿ ಗುಡಿಸುವುದು

(ii) ಮನೆ ಬಾಗಿಲಿನಿಂದ ಕಸ ಸಂಗ್ರಹಣೆ ಎಂದರೆ ತಳ್ಳುಗಾಡಿ/ಸಣ್ಣ ತ್ರಿಚಕ್ರ ವಾಹನಗಳನ್ನು ಬಳಕೆ ಮಾಡಿ ಘನತ್ಯಾಜ್ಯ ಸಂಗ್ರಹಣೆ (ಇದರಲ್ಲಿ ಮಲವು ಒಳಗೊಂಡಿರುವುದಿಲ್ಲ)

(iii) ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಎಂದರೆ ಕಾಂಪೋಸ್ಟು ತಯಾರಿಕೆ, ಜೈವಿಕ ಮಿಥೇನೈಸೇಷನ್, ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳು ಮತ್ತು ಇತರ ತ್ಯಾಜ್ಯ ಸಂಸ್ಕರಣಾ ಘಟಕಗಳಿಂದ ಇತ್ಯಾದಿಗಳ ಕಾರ್ಯಾಚರಣೆಯ ಹೊಣೆಗಾರಿಕೆಯನ್ನು ಹೊಂದಿರುವಂತಹ ವ್ಯಕ್ತಿ.

(iv) ಗ್ರಾಮ ಪಂಚಾಯತಿಯು ಕಾಲಕಾಲಕ್ಕೆ ಅಗತ್ಯ ಇತರ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳು.

2.39 **'ತ್ಯಾಜ್ಯ ವ್ಯಾಪಾರಿಗಳು'** ಎಂದರೆ ಗುಜರಿ ವ್ಯಾಪಾರಿಗಳು, ಸಂಚಾರಿ ಖರೀದಿದಾರರು ಮತ್ತು ವ್ಯಾಪಾರಿಗಳನ್ನೂ ಒಳಗೊಂಡಂತೆ ಜೈವಿಕ ಅವಿಘಟಿತ ತ್ಯಾಜ್ಯಗಳನ್ನು ವಿಂಗಡಣೆ, ಮಾರಾಟ ಮತ್ತು ಖರೀದಿಯಲ್ಲಿ ಒಳಗೊಂಡಿರುವಂತಹ ವ್ಯಕ್ತಿಗಳು ಮತ್ತು ಸಂಸ್ಥೆಗಳು.

(2) ಈ ಉಪವಿಧಿಗಳಲ್ಲಿ ಪರಿಭಾಷಿಸಲಾರದ ಯಾವುದೇ ಪದಗಳು ಅಥವಾ ಅಭಿವ್ಯಕ್ತಿಗಳಿಗೆ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ರಲ್ಲಿ ಅವುಗಳಿಗೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ II – ಘನ ತ್ಯಾಜ್ಯ ನಿರ್ವಹಣಾ ಯೋಜನೆ

### 3. ಘನ ತ್ಯಾಜ್ಯ ನಿರ್ವಹಣಾ ಯೋಜನೆ ಮತ್ತು ಆಯವ್ಯಯಗಳು

3.1 ಗ್ರಾಮ ಪಂಚಾಯತಿಯು ವೈಯಕ್ತಿಕವಾಗಿಯಾಗಲೀ ಅಥವಾ ಒಂದು ಸಮೂಹವಾಗಿಯಾಗಲೀ, ವಾರ್ಷಿಕ ಯೋಜನೆಗಳನ್ನು ಒಳಗೊಂಡ ಐದು ವರ್ಷಗಳ ನೈರ್ಮಲ್ಯ ಯೋಜನೆಯನ್ನು ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯಾಗಿ ರೂಪಿಸತಕ್ಕದ್ದು.

3.2. ಗ್ರಾಮ ಪಂಚಾಯತಿ ನೈರ್ಮಲ್ಯ ಯೋಜನೆಯು ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಒಳಗೊಂಡಿರತಕ್ಕದ್ದು:

(i) ಗ್ರಾಮ ಪಂಚಾಯತಿಯಿಂದ ಕಾಲಮಿತಿಯಲ್ಲಿ ಮತ್ತು ಸಾಧಿಸಬೇಕಾದ ವಾರ್ಷಿಕ ಮೈಲಿಗಲ್ಲುಗಳ ಅನುಷ್ಠಾನ

(ii) ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಆಸ್ತಿ ಮತ್ತು ಮೂಲಭೂತ ಸೌಲಭ್ಯ

(iii) ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಿಗೆ ಅಗತ್ಯವಿರುವ ಮಾನವ ಸಂಪನ್ಮೂಲಗಳು

(iv)ಬಂಡವಾಳ ಮತ್ತು ಕಾರ್ಯಾಚರಣೆಯ ವೆಚ್ಚಗಳಿಗೆ ಅಂತಹ ವೆಚ್ಚವನ್ನು ಭರಿಸಲು ಮೂಲಗಳೂ ಒಳಗೊಂಡಂತೆ ಅಗತ್ಯವಿರುವ ಅನುದಾನ.

(v)ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾನದಂಡಗಳು

(vi)ಸಾಮರ್ಥ್ಯ ವರ್ಧನೆ, ಅರಿವು ಮತ್ತು ನಡವಳಿಕೆಯ ಬದಲಾವಣೆಯ ಕಾರ್ಯ ಚಟುವಟಿಕೆಗಳು; ಮತ್ತು

(vii)ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಕಾಲಕಾಲಕ್ಕೆ ತಿಳಿಸಬಹುದಾದ ಇತರ ಯಾವುದೇ ವಿವರಗಳು

3.3 ಗ್ರಾಮ ಪಂಚಾಯತಿಯ ಭೌಗೋಳಿಕ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವಂತಹ ಘನ ತ್ಯಾಜ ನಿರ್ವಹಣೆಗೆ ಸಂಬಂಧಿಸಿದಂತೆ ಸೂಕ್ಷ್ಮ ಯೋಜನೆಗಳ ಆಧಾರದ ಮೇಲೆ ಘನ ತ್ಯಾಜ್ಯದ ಸಂಗ್ರಹಣೆ ಮತ್ತು ಸಂಸ್ಕರಣಾ ತಂತ್ರ ಕುರಿತಂತೆ ಗ್ರಾಮ ಪಂಚಾಯತಿಯು ವಿವರವಾದ ಯೋಜನಾ ವರದಿಯನ್ನು ತಯಾರಿಸತಕ್ಕದ್ದು ಮತ್ತು ಇದರಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನು ಸಮೂಹ ಮಾದರಿಯನ್ವಯ ಸಂಸ್ಕರಣೆಯನ್ನೂ ಸಹ ಒಳಗೊಂಡಿರಬಹುದು.

3.4. ಅಂತಹ ವಿವರವಾದ ಯೋಜನಾ ವರದಿ ಮತ್ತು ಸೂಕ್ಷ್ಮ ಯೋಜನೆಗಳು ಕೆಳಕಂಡವುಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಒಳಗೊಂಡಿರತಕ್ಕದ್ದು:

(i) ವಿವಿಧ ವರ್ಗಗಳ ಘನ ತ್ಯಾಜ್ಯದ ಸಂಗ್ರಹಣಾ ಕಾಲಮಿತಿ
(ii) ಸಂಗ್ರಹಣಾ ವಾಹನಗಳು ಮತ್ತು ಸ್ಥಳದ ವಿವರಗಳು;
(iii) ಗ್ರಾಮ ಪಂಚಾಯತಿಯಲ್ಲಿ ಗ್ರಾಮದ(ಗಳ) ಭೂಪಟ(ನಕ್ಷೆ)
(iv) ಬೀದಿ ಕಸ ಗುಡಿಸುವ ಸಲುವಾಗಿ ರಸ್ತೆಗಳು/ಸಾರ್ವಜನಿಕ ಬೀದಿಗಳು

(v) ಘನ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯವಿರುವ ಸಿಬ್ಬಂದಿ
(vi) ಘನ ತ್ಯಾಜ್ಯ ನಿರ್ವಹಣೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಕಾಲಕಾಲಕ್ಕೆ ತಿಳಿಸಬಹುದಾದ ಇತರೆ ಯಾವುದೇ ಮಾಹಿತಿಗಳು.

3.5. ಗ್ರಾಮ ಪಂಚಾಯತಿಗಳು ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯ ಭಾಗವಾಗಿ ವಾರ್ಷಿಕ ಅಭಿವೃದ್ಧಿ ಯೋಜನೆಯನ್ನು ತಯಾರಿಸತಕ್ಕದ್ದು, ಮತ್ತು ಇದರಲ್ಲಿ:

(i) ಘನತ್ಯಾಜ್ಯ ಮೂಲಭೂತ ಸೌಲಭ್ಯ ಮತ್ತು ಸೌಕರ್ಯಕೇಂದ್ರಗಳ ಪ್ರಾರಂಭಿಕ ಹೂಡಿಕೆಗಳಿಗೆ ಅಗತ್ಯವಿರುವ ಬಂಡವಾಳ ವೆಚ್ಚ;
(ii) ಸೌಲಭ್ಯ ಕೇಂದ್ರಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಅಗತ್ಯವಿರುವ ಪ್ರತ್ಯಾವರ್ತನಾ (recurrent) ವೆಚ್ಚಗಳು.
(iii) ತರಬೇತಿ, ಮಾಹಿತಿ ಶಿಕ್ಷಣ ಮತ್ತು ಸಂವಹನ, ನಡವಳಿಕೆಗಳಲ್ಲಿ ಬದಲಾವಣೆ ಮತ್ತು ಜಾಗೃತಿ ಕಾರ್ಯಕ್ರಮಗಳಂತಹ ಕಾರ್ಯಚಟುವಟಿಕೆಗಳಿಗೆ ಕಾರ್ಯಕ್ರಮ ವೆಚ್ಚ. ಗ್ರಾಮ ಪಂಚಾಯತಿಗಳು ತಮ್ಮ ವಾರ್ಷಿಕ ಆಯವ್ಯಯದಲ್ಲಿ ಕನಿಷ್ಟ (ಶೇ 25%) ರಷ್ಟನ್ನು ಪ್ರತಿ ವರ್ಷವೂ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಿಗೆ ಕಾದಿರಿಸತಕ್ಕದ್ದು.

3.6. ಗ್ರಾಮ ಪಂಚಾಯತಿಗಳು ಘನ ತ್ಯಾಜ್ಯ ನಿರ್ವಹಣೆಯನ್ನೂ ಒಳಗೊಂಡಂತೆ, ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಿಗಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯತಕ್ಕದ್ದು, ಮತ್ತು ಅದರಲ್ಲಿ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕಗಳು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಯೋಜನೆಗಳಡಿಯಲ್ಲಿನ ಅನುದಾನ ಮತ್ತು ನಿಧಿಗಳನ್ನು ಅದರಲ್ಲಿ ಜಮಾ ಮಾಡತಕ್ಕದ್ದು.

(i) ಈ ಬ್ಯಾಂಕ್ ಖಾತೆಯಿಂದ ಹಣವನ್ನು ಕೇವಲ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳು ಮತ್ತು ಕಾರ್ಯಗಳಿಗೆ ತಗಲುವ ವೆಚ್ಚವನ್ನು ಮಾತ್ರ ಭರಿಸತಕ್ಕದ್ದು.
(ii) ಈ ಬ್ಯಾಂಕ್ ಖಾತೆಯಿಂದ ನಡೆಸಲಾಗುವ ವ್ಯವಹಾರಗಳನ್ನು ನಿಯತಕಾಲಿಕವಾಗಿ ಮತ್ತು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ನಿರ್ಧರಿಸಿದ ವಿಧಾನದಲ್ಲಿ ಅನ್ವಯವಾಗುವ ಕಾಯಿದೆಯ ರೀತ್ಯ ಲೆಕ್ಕ ಪರಿಶೋಧನೆ ನಡೆಸತಕ್ಕದ್ದು.

## ಅಧ್ಯಾಯ III- ಅಧಿಕಾರಗಳು ಮತ್ತು ಕರ್ತವ್ಯಗಳು

### 4. ಗ್ರಾಮ ಪಂಚಾಯತಿಯಲ್ಲಿ ವಿವಿಧ ಭಾಗೀದಾರರುಗಳ ಅಧಿಕಾರಗಳು ಮತ್ತು ಕರ್ತವ್ಯಗಳು

4.1. ಈ ಉಪವಿಧಿಗಳನ್ವಯ, ಗ್ರಾಮ ಪಂಚಾಯತಿಯು ಪ್ರಮುಖವಾಗಿ ಘನ ತ್ಯಾಜ್ಯ ಸಂಗ್ರಹಣೆ, ಸಂಸ್ಕರಣೆ ಮತ್ತು ವಿಲೇವಾರಿಯ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು.

4.2 **ಯೋಜನೆ ಮತ್ತು ನಿರ್ವಹಣೆ:** ಅಧಿನಿಯಮದಡಿಯಲ್ಲಿ ರಚಿಸಲಾಗಿರುವ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ ಮತ್ತು/ಅಥವಾ ಗ್ರಾಮೀಣ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕಾಂಶ ಸಮಿತಿಯು ಅಥವಾ ಅವುಗಳ ಅನುಪಸ್ಥಿತಿಯಲ್ಲಿ, ಗ್ರಾಮ ಪಂಚಾಯತಿಯು ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕೆಳಕಂಡ ಕಾರ್ಯಚಟುವಟಿಕೆಗಳಿಗೆ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(i) ಘನ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಾದ ಜೈವಿಕ ವಿಘಟಿತ ತ್ಯಾಜ್ಯ ಸಂಸ್ಕರಣೆ ಮತ್ತು ಜೈವಿಕ ಅವಿಘಟಿತ ತ್ಯಾಜ್ಯವನ್ನು ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರದಲ್ಲಿ ದಾಸ್ತಾನು ಮಾಡುವ ಸಲುವಾಗಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಭೂಮಿಯನ್ನು ಗುರುತಿಸುವುದು ಮತ್ತು ಹಂಚಿಕೆ ಮಾಡತಕ್ಕದ್ದು.

(ii) ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯಡಿಯಲ್ಲಿ ನೈರ್ಮಲ್ಯ ಯೋಜನೆಯ ತಯಾರಿಕೆ, ವಿವರವಾದ ಯೋಜನಾ ವರದಿ, ಎಸ್‌ಡಬ್ಲ್ಯೂಎಂ ಸೂಕ್ಷ್ಮ ಯೋಜನೆಗಳು, ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಿಗೆ ವಾರ್ಷಿಕ ಆಯವ್ಯಯವು ಗ್ರಾಮ ಪಂಚಾಯತಿಯ ಒಟ್ಟು ವಾರ್ಷಿಕ ಆಯವ್ಯಯದಲ್ಲಿ ಶೇ (25%) ಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅಂತಹ ಯೋಜನೆಗಳು ಮತ್ತು ಆಯವ್ಯಯವು ಗ್ರಾಮಸಭೆಗಳ ಅನುಮೋದನೆಯನ್ನು ಪಡೆಯತಕ್ಕದ್ದು.

(iii) ಘನ ತ್ಯಾಜ್ಯ ನಿರ್ವಹಣಾ ಸೇವೆಗಳಿಗಾಗಿ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕವನ್ನು ಜಾರಿಗೊಳಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(iv) ಘನ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಿಗಾಗಿ ಕಾಮಗಾರಿಗಳು ಮತ್ತು ವೆಚ್ಚಗಳ ಅನುಮೋದನೆ ಬಂಡವಾಳ ಮೂಲಸೌಲಭ್ಯಗಳಾದ ಯಂತ್ರೋಪಕರಣಗಳು, ವಾಹನಗಳು ಮತ್ತು ಉಪಕರಣಗಳ ಪಡೆಯುವಿಕೆ ಮತ್ತು ಏಜೆನ್ಸಿಗಳಿಗಾಗಿ ಡಿಡಬ್ಲ್ಯೂಸಿಸಿಗಳಂತಹ ಬಂಡವಾಳ ಮೂಲಭೂತ ಸೌಲಭ್ಯಗಳ ಸಂಘಟಿಸುವಿಕೆ, ತ್ಯಾಜ್ಯ ಸಂಗ್ರಹಣಾ ವಾಹನಗಳು ಮತ್ತು ಕಾಂಪೋಸ್ಟು ತಯಾರಿಕೆ ಅಥವಾ ಜೈವಿಕ ಮಿಥೆನೈಸೇಷನ್ ಘಟಕಗಳ ಸ್ಥಾಪನೆ.

(iv) ಘನತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆಯಂತಹ ವಿವಿಧ ಕಾರ್ಯಚಟುವಟಿಕೆಗಳಿಗಾಗಿ ಮತ್ತು ಗ್ರಾಮ ಪಂಚಾಯತಿಯ ವ್ಯಾಪ್ತಿ ಪ್ರದೇಶದಲ್ಲಿ ವಿವಿಧ ಮಾಹಿತಿ, ಶೈಕ್ಷಣಿಕ ಮತ್ತು ನಡವಳಿಕೆಗಳಲ್ಲಿ ಬದಲಾವಣೆಯಂತಹ ಕಾರ್ಯಚಟುವಟಿಕೆಗಳು ಸಿಬ್ಬಂದಿ ಮತ್ತು/ಅಥವಾ ಏಜೆನ್ಸಿಗಳ ನೇಮಕ

(v) ಮರುಆವರ್ತಿಸಲಾರದಂತಹ ಜೈವಿಕ ಅವಿಘಟಿತ ತ್ಯಾಜ್ಯಗಳನ್ನು ಅತಿ ಸಮೀಪದ ತಾಲ್ಲೂಕು ಪಂಚಾಯತಿ ಮತ್ತು/ಅಥವಾ ಜಿಲ್ಲಾ ಪಂಚಾಯತಿಯ ಸಂಗ್ರಹಣಾ ಕೇಂದ್ರಕ್ಕೆ ಅಗತ್ಯವಿರುವಂತೆ ಸಾಗಾಣಿಕೆ ಮಾಡುವ ಸಲುವಾಗಿ ಸಾಗಣೆಯ ಬೆಂಬಲವನ್ನು ಒದಗಿಸುವುದು.

(vi) ಪ್ರಮಾಣಿತ ಪರಿಣಾಮಗಳಾದ ಮೂಲದಲ್ಲಿಯೇ ವಿಂಗಡಣೆಯಲ್ಲಿ ಸುಧಾರಣೆ, ಘನ ತ್ಯಾಜ್ಯದ ರಾಶಿ ಹಾಕುವಿಕೆ ಮತ್ತು ಸುಡುವ ಪ್ರಕ್ರಿಯೆಯಲ್ಲಿ ಇಳಿಕೆ, ಘನ ತ್ಯಾಜ್ಯದಿಂದ ಸಂಪನ್ಮೂಲಗಳನ್ನು ಪಡೆಯುವಲ್ಲಿ ಹೆಚ್ಚಳ, ಯುಕ್ತ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಕಾರಣದಿಂದಾಗಿ ಮತ್ತು ತನ್ಮೂಲಕವೇ ಮತ್ತು/ಅಥವಾ ಇತರ ಅರ್ಹತೆಯುಳ್ಳಏಜೆನ್ಸಿಗಳ ಮೂಲಕ ಸ್ಥಳೀಯ ಆರೋಗ್ಯ ಮತ್ತು ಪರಿಸರದಲ್ಲಿ ಸುಧಾರಣೆ.

(viii) ಘನ ತ್ಯಾಜ್ಯ ನಿರ್ವಹಣೆ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ವೆಚ್ಚದ ಇದಿರು ಅರೆ ವಾರ್ಷಿಕ ಆಯವ್ಯಯದ ಪರಿಶೀಲನೆ ಘನತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆ ಕುರಿತಂತೆ ಕಾರ್ಯಾಚರಣೆಯ ಕುರಿತಂತೆ ಅನುಷ್ಠಾನದಲ್ಲಿನ ಪ್ರಗತಿ ಮತ್ತು ಕಾರ್ಯಾಚರಣೆಯ ನಿರ್ವಹಣೆಯ ತ್ರೈಮಾಸಿಕ ಮತ್ತು ವಾರ್ಷಿಕ ವರದಿಗಳು.

(ix) ರಾಜ್ಯದಿಂದ ಹೊರಡಿಸಲಾದ ಮಾರ್ಗಸೂಚಿಯನ್ವಯ ಪ್ರಮುಖ ಭಾಗೀದಾರರುಗಳು, ಫಲಾನುಭವಿಗಳು, ಸಂಕಷ್ಟದಲ್ಲಿರುವ ಸಮುದಾಯಗಳು ಮತ್ತು ನೈರ್ಮಲ್ಯ ಯೋಜನೆಯ ಪರಿಶೀಲನೆಗಾಗಿ ಅಗತ್ಯವಿಬಹುದಾದ ಇತರ ಗ್ರಾಮ ಪಂಚಾಯತಿ ಸದಸ್ಯರನ್ನು ಒಳಪಡಿಸಿ ಗ್ರಾಮ ಪಂಚಾಯತಿಯಿಂದ ಅಭಿವೃದ್ಧಿ ಪಡಿಸಲಾದ ನೈರ್ಮಲ್ಯ ಯೋಜನೆಯನ್ನು ಸಾಮಾಜಿಕ ಪರಿಶೋಧನೆಗೆ ಒಳಪಡಿಸುವ ಸೌಲಭ್ಯ ಕಲ್ಪಿಸುವುದು

(x) ಗ್ರಾಮ ಪಂಚಾಯತಿ, ಜಿಲ್ಲೆ ಮತ್ತು ರಾಜ್ಯ ಪ್ರಾಧಿಕಾರಗಳಿಂದ ಅನ್ವಯವಾಗುವ ಕಾಯಿದೆಗನುಸಾರವಾಗಿ ನಿರ್ದೇಶಿಸಲ್ಪಡಬಹುದಾದ ಇತರ ಯಾವುದೇ ಪಾತ್ರ ಮತ್ತು/ಅಥವಾ ಹೊಣೆಗಾರಿಕೆಗಳು.

4.3 ಗ್ರಾಮ ಪಂಚಾಯತಿಗಳು ಮತ್ತು ಅದರ ಸಮಿತಿಗಳ ವ್ಯವಹಾರ ನಿರ್ವಹಣೆಯು ಗ್ರಾಮ ಪಂಚಾಯತಿಗಳ ಅಥವಾ ಅದರ ಸಮಿತಿಗಳ ಸಭೆಗಳಲ್ಲಿ ಅಧಿನಿಯಮದಡಿಯಲ್ಲಿ ರಚಿಸಲಾದ ವಿಧಿವಿಧಾನಗಳನ್ವಯ ನಡೆಯತಕ್ಕದ್ದು, ಪರಂತು, ಗ್ರಾಮ ಪಂಚಾಯತಿಗಳು ಮತ್ತು/ಅಥವಾ ಸಮಿತಿಗಳು ಈ ಉಪ–ವಿಧಿಗಳ ಉದ್ದೇಶಗಳಿಗಾಗಿ ಒಂದು ವರ್ಷದ ಅವಧಿಯಲ್ಲಿ ಕನಿಷ್ಠ ಮೂರು ತಿಂಗಳುಗಳಿಗೊಮ್ಮೆ ಸಭೆ ಸೇರತಕ್ಕದ್ದು.

**4.4 ಪಂಚಾಯತಿ ಅಭಿವೃದ್ಧಿ ಅಧಿಕಾರಿ :** ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕೆಳಕಂಡ ಕರ್ತವ್ಯಗಳಿಗೆ ಜವಾಬ್ದಾರನಾಗಿರತಕ್ಕದ್ದು:

(i) ಗ್ರಾಮ ಪಂಚಾಯತಿ ಮತ್ತು ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ ಮತ್ತು/ಅಥವಾ ಗ್ರಾಮೀಣ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯ ಭಾಗವಾಗಿ ನೈರ್ಮಲ್ಯ

ಯೋಜನೆಗಳು, ವಿವರವಾದ ಯೋಜನಾ ವರದಿ, ಎಸ್‌ಡಬ್ಲ್ಯೂಎಂ ಸೂಕ್ಷ್ಮ ಯೋಜನೆಗಳು, ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗೆ ವಾರ್ಷಿಕ ಆಯವ್ಯಯ ತಯಾರಿಸುವ ಸಂಬಂಧ ಮತ್ತು ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕ ಲೆಕ್ಕ ಹಾಕುವ ಮತ್ತು ಅಂತಿಮಗೊಳಿಸುವ ಕಾರ್ಯಗಳಲ್ಲಿ ನೆರವು ನೀಡತಕ್ಕದ್ದು.

(ii) ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ವಿವಿಧ ತಂತ್ರಜ್ಞಾನಗಳು, ಯೋಜನೆಗಳು ಇತ್ಯಾದಿ ಕುರಿತಂತೆ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಮಾಹಿತಿಯನ್ನು ಒದಗಿಸತಕ್ಕದ್ದು.

(iii) ಘನ ತ್ಯಾಜ್ಯ ನಿರ್ವಹಣೆ ವ್ಯವಸ್ಥೆಗಳಾದ ಮನೆ ಮನೆಯಿಂದ ಕಸ ಸಂಗ್ರಹಣೆ, ಬೀದಿ ಕಸ ಗುಡಿಸುವಿಕೆ, ಕಾಂಪೋಸ್ಟ್ ಗುಂಡಿಗಳ ನಿರ್ಮಾಣ, ಜೈವಿಕ ಮಿಥೆನೈಸೇಷನ್ ಸ್ಥಾವರಗಳು ಮತ್ತು ಡಿಡಬ್ಲ್ಯೂಸಿಸಿ, ನೈರ್ಮಲ್ಯ ಭೂ ಭರ್ತಿಗಳು (ಅನ್ವಯಿಸಿದಲ್ಲಿ ಮಾತ್ರ) ಮತ್ತು ಅಂತಹ ಸಂಸ್ಕರಣಾ ಮತ್ತು ವಿಲೇವಾರಿ ಸೌಲಭ್ಯಕೇಂದ್ರಗಳ ಕಾರ್ಯಾಚರಣೆಯ ಅನುಷ್ಠಾನ ಕಾರ್ಯಾಚರಣೆ ಮತ್ತು ನಿರ್ವಹಣೆಯ ಮೇಲ್ವಿಚಾರಣೆ ನಡೆಸತಕ್ಕದ್ದು.

(iv) ಘನ ತ್ಯಾಜ್ಯ ನಿರ್ವಹಣೆಗಾಗಿ ಸೂಕ್ತ ವಾಹನಗಳು ಹಾಗೂ ಉಪಕರಣಗಳನ್ನು ಪಡೆಯಲು ಗ್ರಾಮ ಪಂಚಾಯತಿಗೆ ನೆರವನ್ನು ನೀಡತಕ್ಕದ್ದು.

(v) ಸಾಮಾನ್ಯ ಜನರಲ್ಲಿ ಅರಿವು ಮೂಡಿಸುವ ಕಾರ್ಯಚಟುವಟಿಕೆಗಳೊಂದಿಗೆ ಮಹಿಳೆಯರು ಹಾಗೂ ಹದಿವಯಸ್ಕ ಬಾಲಕಿಯರತ್ತ ವಿಶೇಷ ಗಮನ ಹರಿಸಿ ಋತುಸ್ರಾವ ನೈರ್ಮಲ್ಯ ನಿರ್ವಹಣಾ ಚಟುವಟಿಕೆಯ ಕುರಿತಂತೆ ಮತ್ತು ಋತುಸ್ರಾವ ಸ್ಯಾನಿಟರಿ ತ್ಯಾಜ್ಯದ ವಿಲೇವಾರಿ ಕುರಿತಂತೆ ಅರಿವು ಮೂಡಿಸುವುದು.

(vi) ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಲೆಕ್ಕಪತ್ರಗಳ, ಸಂಪನ್ಮೂಲಗಳ ಆಸ್ತಿಗಳು ಮತ್ತು ವ್ಯವಸ್ಥೆಗಳನ್ನೂ ಒಳಗೊಂಡಂತೆ ದೈನಂದಿನ ಹಣಕಾಸು ನಿರ್ವಹಣೆ ಮತ್ತು ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ದಾಖಲೆಗಳ ನಿರ್ವಹಣೆ.

(vii) ಘನತ್ಯಾಜ್ಯ ನಿರ್ವಹಣೆಯ ಸ್ಥಿತಿ ಮತ್ತು ಪ್ರಗತಿಗೆ ಸಾಕ್ಷ್ಯವಾಗುವಂತಹ ವರದಿಗಳು, ನಮೂನೆಗಳು ಮತ್ತಿತರ ದಸ್ತಾವೇಜುಗಳನ್ನು ತಯಾರಿಸುವಲ್ಲಿ ಗ್ರಾಮ ಪಂಚಾಯತಿ ಮತ್ತು ಸಮಿತಿಗಳಿಗೆ ನೆರವು ಒದಗಿಸುವುದು

(viii) ಗ್ರಾಮ ಪಂಚಾಯತಿ, ಜಿಲ್ಲೆ ಮತ್ತು ರಾಜ್ಯ ಪ್ರಾಧಿಕಾರಗಳಿಂದ ಅನ್ವಯವಾಗುವ ಕಾಯಿದೆಗನುಸಾರವಾಗಿ ನಿರ್ದೇಶಿಸಲ್ಪಡಬಹುದಾದ ಇತರ ಯಾವುದೇ ಪಾತ್ರ ಮತ್ತು/ಅಥವಾ ಹೊಣೆಗಾರಿಕೆಗಳು.

4.5 **ಸರ್ಕಾರೇತರ ಮತ್ತು ಸಮುದಾಯ ಆಧಾರಿತ ಸಂಘಟನೆಗಳು:** ಗ್ರಾಮ ಪಂಚಾಯತಿಯು ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸರ್ಕಾರೇತರ ಮತ್ತು/ಅಥವಾ ಸಮುದಾಯ ಆಧಾರಿತ ಸಂಘಟನೆಗಳು ಮತ್ತು ಸ್ವಸಹಾಯ ಗುಂಪುಗಳಿಗೆ ಕೆಳಕಂಡ ಪಾತ್ರಗಳನ್ನು ವಹಿಸಬಹುದು.

(i) ಗ್ರಾಮ ಪಂಚಾಯತಿಗಳಿಗೆ ವಿವಿಧ ಅರಿವು, ಮಾಹಿತಿ, ಶೈಕ್ಷಣಿಕ ಮತ್ತು ನಡವಳಿಕೆಗಳ ಬದಲಾವಣೆ ಕಾರ್ಯಚಟುವಟಿಕೆಗಳಲ್ಲಿ ಸಂಪೂರ್ಣ ಸಮುದಾಯವನ್ನು ಒಳಪಡಿಸುವಲ್ಲಿ ಯೋಜನೆಗಳ ತಯಾರಿಕೆ ಮತ್ತು ಮಾಹಿತಿ ಪ್ರಚಾರ ಕಾರ್ಯಚಟುವಟಿಕೆಗಳಿಗೆ ಬೆಂಬಲ ನೀಡತಕ್ಕದ್ದು.

(ii) ಘನತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಲ್ಲಿ ಒಳಗೊಂಡಿರುವಂತಹ ಗ್ರಾಮ ಪಂಚಾಯತಿ ಅಧಿಕಾರಿಗಳು, ನೈರ್ಮಲ್ಯ ಪ್ರೇರಕರು (ಉತ್ತೇಜಕರು) ಏಜೆನ್ಸಿಗಳು ಮತ್ತಿತರ ವ್ಯಕ್ತಿಗಳನ್ನು ತರಬೇತಿ ಮತ್ತು ಸಾಮರ್ಥ್ಯ ವರ್ಧನೆಯಲ್ಲಿ ಒಳಪಡಿಸುವಿಕೆ

(iii) ನೈರ್ಮಲ್ಯ ಯೋಜನೆ ಮತ್ತಿತರ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳ ಅನುಷ್ಠಾನದಲ್ಲಿ ಗ್ರಾಮ ಪಂಚಾಯತಿಗೆ ಸಹಕಾರ ನೀಡತಕ್ಕದ್ದು.

(iv) ಸಮೀಕ್ಷೆಗಳನ್ನು ನಡೆಸುವುದು ಮತ್ತು ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣಾ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಲ್ಲಿ ಸಾಮಾಜಿಕ ಮತ್ತು ಇತರ ಸ್ವತಂತ್ರ ಪರಿಶೋಧನೆಯಲ್ಲಿ ಸಹಕಾರ ಒದಗಿಸತಕ್ಕದ್ದು.

(v) ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ, ಗ್ರಾಮ ಪಂಚಾಯತಿಯಲ್ಲಿ ಉತ್ಪಾದಿಸಲಾದ ಘನ ತ್ಯಾಜ್ಯದ ಸಾಗಾಣಿಕೆ ಮತ್ತು ಸಂಸ್ಕರಣೆಯಂತಹ ಗ್ರಾಮ ಪಂಚಾಯತಿಯಿಂದ ವಹಿಸಬಹುದಾದ ಕಾರ್ಯಚಟುವಟಿಕೆಗಳು

(vi) ಗ್ರಾಮ ಪಂಚಾಯತಿ, ಜಿಲ್ಲೆ ಮತ್ತು ರಾಜ್ಯ ಪ್ರಾಧಿಕಾರಗಳಿಂದ ಅನ್ವಯವಾಗುವ ಕಾಯಿದೆಗನುಸಾರವಾಗಿ ನಿರ್ದೇಶಿಲ್ಪಡಬಹುದಾದ ಇತರ ಯಾವುದೇ ಪಾತ್ರ ಮತ್ತು/ಅಥವಾ ಹೊಣೆಗಾರಿಕೆಗಳು.

**4.6 ನೈರ್ಮಲ್ಯ ಪ್ರೇರಕರು (Sanitation Motivators) : ಗ್ರಾಮ ಪಂಚಾಯತಿ ವತಿಯಿಂದ** ವಹಿಸಬಹುದಾದ ಈ ಕೆಳಕಂಡ ಕರ್ತವ್ಯಗಳನ್ನು ನೈರ್ಮಲ್ಯ ಪ್ರೇರಕರು ಹೊಂದಿರತಕ್ಕದ್ದು.

(i) ಗ್ರಾಮ ಪಂಚಾಯತಿ ನೈರ್ಮಲ್ಯ ಯೋಜನೆಗಳು, ವಿವರವಾದ ಯೋಜನಾ ವರದಿ, ಎಸ್‌ಡಬ್ಲ್ಯುಎಂ ಸೂಕ್ಷ್ಮ ಯೋಜನೆಗಳು ಮತ್ತು ಇತರ ತ್ಯಾಜ್ಯ ನಿರ್ವಹಣಾ ಯೋಜನೆಗಳನ್ನು ಸಿದ್ಧ ಪಡಿಸುವಲ್ಲಿ ಗ್ರಾಮ ಪಂಚಾಯತಿಗೆ ನೆರವು ನೀಡತಕ್ಕದ್ದು.

(ii) ಸಮಿತಿಗಳ ಸದಸ್ಯರುಗಳು, ಏಜೆನ್ಸಿಗಳು ಮತ್ತು ಘನ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸುವ ವ್ಯಕ್ತಿಗಳ ಬಲಪಡಿಸುವಿಕೆ ಮತ್ತು ಸಾಮರ್ಥ್ಯ ವರ್ಧನೆಗೆ ಅನುವು ಮಾಡಿಕೊಡತಕ್ಕದ್ದು.

(iii) ವಿವಿಧ ಅರಿವು ಮೂಡಿಸುವ ಕಾರ್ಯಕ್ರಮಗಳು, ಮಾಹಿತಿ ಮತ್ತು ಶೈಕ್ಷಣಿಕ ಮತ್ತು ಸಂವಹನ ಕಾರ್ಯಚಟುವಟಿಕೆಗಳನ್ನು ಯೋಜಿಸಲು, ಪ್ರಚಾರ ಮಾಡಲು ಮತ್ತು ಅನುಷ್ಠಾನಗೊಳಿಸುವಲ್ಲಿ ಸಹಕಾರ ಒದಗಿಸುವುದು ಮತ್ತು ಸುಸ್ಥಿರ ನಡವಳಿಕೆಯ ಬದಲಾವಣೆಗೆ ಅನುವು ಮಾಡತಕ್ಕದ್ದು.

(iv) ಘನ ತ್ಯಾಜ್ಯ ನಿರ್ವಹಣೆಗೆ ರೂಪಿಸಿರುವಂತಹ ಮೂಲಭೂತ ಸೌಲಭ್ಯ, ಉಪಕರಣಗಳು, ಮತ್ತು ಈ ಸಂಬಂಧ ಪಡೆದಿರುವಂತಹ ಇತರ ಆಸ್ತಿಗಳ ಗುಣಮಟ್ಟದ ಮೌಲ್ಯಮಾಪನ ಮಾಡತಕ್ಕದ್ದು.

(v) ಸುರಕ್ಷಿತ ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಉದ್ದೇಶಗಳಿಗಾಗಿಸೃಜಿಸಲಾಗಿರುವ ಸಂಪನ್ಮೂಲಗಳ ಸಮರ್ಪಕ ಕಾರ್ಯಾಚರಣೆ ಮತ್ತು ನಿರ್ವಹಣೆ ಕುರಿತು ಅರಿವನ್ನು ಹೆಚ್ಚಿಸತಕ್ಕದ್ದು.

(vi) ಘನ ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮಗಳ ಸುಸ್ಥಿರತೆಯನ್ನು ಖಾತ್ರಿ ಪಡಿಸುವ ಸಲುವಾಗಿ ಮೇಲ್ವಿಚಾರಣಾ ಕಾರ್ಯಚಟುವಟಿಕೆಗಳಲ್ಲಿ ಮತ್ತು ದಾಖಲೆಗಳ ನಿರ್ವಹಣಾ ಕಾರ್ಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ನೆರವು ಒದಗಿಸತಕ್ಕದ್ದು.

(vii) ಋತುಚಕ್ರಕ್ಕೆ ಸಂಬಂಧಿಸಿದಂತೆ ಅರಿವು ಮೂಡಿಸುವುದು ಮತ್ತು ಸ್ಯಾನಿಟರಿ ತ್ಯಾಜ್ಯದ ಸುರಕ್ಷಿತ ವಿಲೇವಾರಿಯೂ ಒಳಗೊಂಡಂತೆ ಋತುಚಕ್ರ ನೈರ್ಮಲ್ಯ ನಿರ್ವಹಣಾ ಕಾರ್ಯಚಟುವಟಿಕೆಗಳು.

(viii) ಸಮೀಕ್ಷೆಗಳನ್ನು ನಡೆಸುವುದು ಮತ್ತು ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣಾ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಲ್ಲಿ ಸಾಮಾಜಿಕ ಮತ್ತು ಇತರ ಸ್ವತಂತ್ರ ಪರಿಶೋಧನೆಯಲ್ಲಿ ಸಹಕಾರ ಒದಗಿಸತಕ್ಕದ್ದು.

(ix) ಗ್ರಾಮ ಪಂಚಾಯತಿ, ಜಿಲ್ಲೆ ಮತ್ತು ರಾಜ್ಯ ಪ್ರಾಧಿಕಾರಗಳಿಂದ ಅನ್ವಯವಾಗುವ ಕಾಯಿದೆಗನುಸಾರವಾಗಿ ನಿರ್ದೇಶಿಲ್ಪಡಬಹುದಾದ ಇತರ ಯಾವುದೇ ಪಾತ್ರ ಮತ್ತು/ಅಥವಾ ಹೊಣೆಗಾರಿಕೆಗಳು.

## ಅಧ್ಯಾಯ IV- ಘನತ್ಯಾಜ್ಯ ವಿಂಗಡಣೆ

### 5. ತ್ಯಾಜ್ಯೋತ್ಪಾದಕನಿಂದ ಮೂಲದಲ್ಲಿಯೇ ವಿವಿಧ ಪ್ರವರ್ಗಗಳ ಘನತ್ಯಾಜ್ಯದ ವಿಂಗಡಣೆ

5.1 ಬೃಹತ್ ತ್ಯಾಜ್ಯೋತ್ಪಾದಕರನ್ನೂ ಒಳಗೊಂಡಂತೆ, ಪ್ರತಿಯೊಬ್ಬ ತ್ಯಾಜ್ಯೋತ್ಪಾದಕನೂ ಸಹ ಘನತ್ಯಾಜ್ಯವನ್ನು ಮೂಲದಲ್ಲಿಯೇ ಕೆಳಕಂಡ ಪ್ರವರ್ಗಗಳಲ್ಲಿ ವಿಂಗಡಣೆ ಮಾಡತಕ್ಕದ್ದು.

(i) ಹಸಿ ತ್ಯಾಜ್ಯವೆಂದೂ ಸಹ ಉಲ್ಲೇಖಿಸಲಾಗುವ ಜೈವಿಕ ವಿಘಟಿತ ತ್ಯಾಜ್ಯ

(ii) ಒಣ ತ್ಯಾಜ್ಯವೆಂದೂ ಸಹ ಉಲ್ಲೇಖಿಸಲಾಗುವ ಜೈವಿಕ ಅವಿಘಟಿತ ತ್ಯಾಜ್ಯ

(iii) ಸ್ಯಾನಿಟರಿ ತ್ಯಾಜ್ಯವನ್ನೂ ಒಳಗೊಂಡಂತೆ ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯ.

5.2. ಸ್ಯಾನಿಟರಿ ತ್ಯಾಜ್ಯವನ್ನು ಸುರಕ್ಷಿತವಾಗಿ ಉತ್ಪಾದಕನಿಂದ ಅಥವಾ ಸೂಕ್ತ ಮುದ್ರೆ (brand) ಮಾಲೀಕರುಗಳು ಒದಗಿಸಿದ ಸಣ್ಣ ಚೀಲಗಳಲ್ಲಿ ಸೂಕ್ತ ರೀತಿಯಲ್ಲಿ ಅದು ಸ್ಪಷ್ಟವಾಗಿ ತನ್ನ ಸ್ವರೂಪವನ್ನು ಸೂಚಿಸುವಂತೆ ಮುಚ್ಚತಕ್ಕದ್ದು ಮತ್ತು ಎಲ್ಲಾ ನೈರ್ಮಲ್ಯ ತ್ಯಾಜ್ಯವನ್ನೂ ಸಹ ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯದೊಂದಿಗೆ ದಾಸ್ತಾನು ಮಾಡತಕ್ಕದ್ದು.

5.3. ಜೈವಿಕ ವಿಘಟಿತ ತ್ಯಾಜ್ಯ, ಜೈವಿಕ ಅವಿಘಟಿತ ತ್ಯಾಜ್ಯ ಮತ್ತು ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯವನ್ನು(ಸ್ಯಾನಿಟರಿ ತ್ಯಾಜ್ಯದೊಂದಿಗೆ)ಅವುಗಳನ್ನು ಬೆರೆಸದೆ ಗ್ರಾಮ ಪಂಚಾಯತಿಗೆ ಮತ್ತು/ಅಥವಾ ಸಂದರ್ಭಾನುಸಾರ ಏಜೆನ್ಸಿಗೆ ಬಟವಾಡೆ ಮಾಡಲು ನಿರ್ದಿಷ್ಟ ಪಡಿಸಿದ ಧಾರಕದಲ್ಲಿ(ಬುಟ್ಟಿ, ತೊಟ್ಟಿ) ಪ್ರತಿಯೊಂದನ್ನೂ ಪ್ರತ್ಯೇಕವಾಗಿ ದಾಸ್ತಾನು ಮಾಡತಕ್ಕದ್ದು.

5.4. ಗ್ರಾಮ ಪಂಚಾಯತಿ ಮತ್ತು /ಅಥವಾ ಸಂದರ್ಭಾನುಸಾರ ಏಜೆನ್ಸಿಗೆ ಬಟವಾಡೆ ಮಾಡುವ ಪೂರ್ವದಲ್ಲಿ, ಕೆಳಕಂಡ ವಿಂಗಡಿಸಲಾದ ಘನ ತ್ಯಾಜ್ಯವನ್ನು ದಾಸ್ತಾನು ಮಾಡುವ ಧಾರಕದ (ಬುಟ್ಟಿ/ತೊಟ್ಟಿ) ವರ್ಣವು ಕೆಳಕಂಡಂತಿರತಕ್ಕದ್ದು.

(i) ಒಂದು ವೇಳೆ ಗ್ರಾಮ ಪಂಚಾಯತಿಯು ಮನೆ ಬಾಗಿಲಿನಿಂದಲೇ ಜೈವಿಕ ವಿಘಟಿತ ತ್ಯಾಜ್ಯವನ್ನು ಸಂಗ್ರಹಿಸಿದಲ್ಲಿ, ಜೈವಿಕ ವಿಘಟಿತ ತ್ಯಾಜ್ಯಕ್ಕಾಗಿ ಹಸಿರು ವರ್ಣದ ಧಾರಕ

(ii) ಜೈವಿಕ ಅವಿಘಟಿತ ತ್ಯಾಜ್ಯ ಅಥವಾ ಉಚ್ಚ ಸಾಂದ್ರತೆಯುಳ್ಳ ಪಾಲಿಥಿನ್‌ಗೆ ನೀಲಿ ವರ್ಣದ ಧಾರಕ, ಮತ್ತು

(iii) ನೈರ್ಮಲ್ಯ ತ್ಯಾಜ್ಯವೂ ಒಳಗೊಂಡಂತೆ ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯಕ್ಕಾಗಿ ಕೆಂಪು ವರ್ಣದ ದಾರಕ.

## ಅಧ್ಯಾಯ V- ಘನ ತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣಿಕೆ

### 6. ಮನೆ ಮನೆಯಿಂದ ವಿಂಗಡಿತ ಘನತ್ಯಾಜ್ಯ ಸಂಗ್ರಹಣೆ

6.1 **ಈ ಉಪ ವಿಧಿಗಳನ್ವಯ** ಗ್ರಾಮ ಪಂಚಾಯತಿಯಿಂದ ಅಧಿಸೂಚಿಸಿದಂತಹ ಸಮಯ ಮತ್ತು ಅಂತಹ ವಿಧಾನದಲ್ಲಿ **ಗ್ರಾಮ** ಪಂಚಾಯತಿಯು ಮನೆಮನೆಯಿಂದಲೂ ವಿಂಗಡಿಸಲಾದ ಘನತ್ಯಾಜ್ಯವನ್ನು ಸಂಗ್ರಹಿಸುವ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು.

6.2 ಗ್ರಾಮ ಪಂಚಾಯತಿಯು ಪ್ರದೇಶವಾರು ಸಮಯವನ್ನು ವಾರದಲ್ಲಿ ಯುಕ್ತ ದಿನವನ್ನೂ ಒಳಗೊಂಡಂತೆ, ಅದರ ನಿರಂತರತೆ ಮತ್ತು ವಿಧಾನವನ್ನು (ತಳ್ಳುಗಾಡಿ ಅಥವಾ ಸ್ವಯಂಚಾಲಿತ ವಾಹನಗಳ ಮೂಲಕ) ವಿವಿಧ ವರ್ಗಗಳ ವಿಂಗಡಿತ ಘನತ್ಯಾಜ್ಯವನ್ನು ಮನೆಮನೆಯಿಂದಲೂ ಸಂಗ್ರಹಿಸುವ ಕುರಿತಂತೆ ಉಪವಿಧಿ 6.4ರನ್ವಯ ಅಧಿಸೂಚಿಸತಕ್ಕದ್ದು.

6.3. ಅಂತಹ ಅಧಿಸೂಚನೆಗಳನ್ನು ಗ್ರಾಮ ಪಂಚಾಯತಿ ಕಚೇರಿಗಳಲ್ಲಿಯೂ ಮತು ಗ್ರಾಮ ಪಂಚಾಯತಿಯ ಇತರ ಪ್ರಮುಖ ಮತ್ತು ಕಣ್ಣಿಗೆ ಗೋಚರವಾಗುವಂತಹ ಸ್ಥಳಗಳಲ್ಲಿಯೂ ಪ್ರಕಟಿಸತಕ್ಕದ್ದು.

ಪರಂತು ಗ್ರಾಮ ಪಂಚಾಯತಿಯು ಜೈವಿಕ ಅವಿಘಟಿತ ತ್ಯಾಜ್ಯವನ್ನು ಕನಿಷ್ಠ ವಾರಕ್ಕೊಮ್ಮೆಯಾದರೂ ಸಹ ಉಪವಿಧಿಗಳಲ್ಲಿನ ಅಧ್ಯಾಯ X ರಡಿಯಲ್ಲಿನ ಬಳಕೆದಾರರ ಶುಲ್ಕದ ವಸೂಲಾತಿಗೆ ಒಳಪಟ್ಟು ಸಂಗ್ರಹಿಸತಕ್ಕದ್ದು.

6.4. ಗ್ರಾಮ ಪಂಚಾಯತಿಯು ಮನೆ ಮನೆಯಿಂದಲೂ ತ್ಯಾಜ್ಯ ಸಂಗ್ರಹಣೆಯ ನಿರಂತರತೆ ಮತ್ತು ವಿಧಾನವನ್ನು ಉಪವಿಧಿಗಳ 6.2 ರನ್ವಯ ನಿರ್ಧರಣೆ ಮಾಡುವ ಸಂದರ್ಭದಲ್ಲಿ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು:

(i) ಜನಸಂಖ್ಯಾ ಸಾಂದ್ರತೆ

(ii) ಘನತ್ಯಾಜ್ಯದ ಗುಣ ಲಕ್ಷಣಗಳು

(iii) ರಸ್ತೆಗಳ ಅಗಲ ಮತ್ತು

(iv) ಗ್ರಾಮ ಪಂಚಾಯತಿಯಲ್ಲಿ ಲಭ್ಯವಿರುವ ಮಾನವ ಶಕ್ತಿ ಮತ್ತು ಅನುದಾನ

6.5. ತ್ಯಾಜ್ಯೋತ್ಪಾದಕರು ಜೈವಿಕ ವಿಘಟಿತ ತ್ಯಾಜ್ಯವನ್ನು ಮನೆ ಮನೆಯಿಂದ ಸಂಗ್ರಹಣೆ ಮಾಡುವವರಿಗೆ ನೀಡುವ ಬದಲು ಜಾನುವಾರುಗಳು, ಮನೆಯಲ್ಲಿಯೇ ಕಾಂಪೋಸ್ಟು ತಯಾರಿಕೆ, ಜೈವಿಕ ಮಿಥೆನೈಸೇಷನ್ ಅಥವಾ ಇತರ ಯಾವುದೇ ವಿಧದ ರೂಡಿಯ ಮೂಲಕ ಅನ್ವಯವಾಗುವ ಕಾಯಿದೆಯಲ್ಲಿ ಅಥವಾ ಮಾರ್ಗಸೂಚಿಯಲ್ಲಿ ಅನುಮತಿಸಿರುವಂತೆ ನಿರ್ವಹಿಸಬಹುದು.

6.6 ಉಪವಿಧಿಯಡಿಯಲ್ಲಿ ಘನತ್ಯಾಜ್ಯವನ್ನು ಮನೆ ಮನೆಯಿಂದ ಸಂಗ್ರಹಿಸುವುದರೊಂದಿಗೆ **ಗ್ರಾಮ ಪಂಚಾಯತಿ ಮತ್ತು** / ಅಥವಾ ಸಂದರ್ಭಾನುಸಾರ ಏಜೆನ್ಸಿಯು ಸಾರ್ವಜನಿಕ ಸ್ಥಳಗಳಾದ ರಸ್ತೆಗಳು, ಸಾರ್ವಜನಿಕ ಬೀದಿಗಳು, ಸಾಮಾನ್ಯ ಪ್ರದೇಶಗಳು, ಆಟದ ಮೈದಾನಗಳು, ಉದ್ಯಾನವನಗಳು, ಮಾರುಕಟ್ಟೆಗಳು, ತೋಟಗಳು, ಪ್ರವಾಸಿ ತಾಣಗಳು ಮತ್ತು ಅದೇ ಮಾದರಿಯ ಪ್ರದೇಶಗಳಿಂದ ನಿರ್ದಿಷ್ಟ ಪಡಿಸಿದ ಸಮಯಗಳು ಮತ್ತು ದಿನಗಳಂದು ತ್ಯಾಜ್ಯವನ್ನು ಸಂಗ್ರಹಿಸಬಹುದು.

6.7. ಗ್ರಾಮ ಪಂಚಾಯತಿಯು ಅನ್ವಯವಾಗುವಂತಹ ಕಾಯಿದೆಗಳಡಿಯಲ್ಲಿ ಯಾವುದೇ ಒಂದು ಏಜೆನ್ಸಿಯನ್ನು ಎಲ್ಲಾ ಮತ್ತು/ಅಥವಾ ಕೆಲವು ವರ್ಗಗಳ ವಿಂಗಡಿತ ಘನ ತ್ಯಾಜ್ಯವನ್ನು ಪಂಚಾಯತಿಯ ಎಲ್ಲಾ ಗ್ರಾಮಗಳ ತ್ಯಾಜ್ಯೋತ್ಪಾದಕರ ಮನೆ ಮನೆಯಿಂದಲೂ ಸಂಗ್ರಹಿಸುವಂತೆ ಪದನಾಮಿಸಬಹುದು.

6.8 ಗ್ರಾಮ ಪಂಚಾಯತಿಯು ದಕ್ಷ ಘನ ತ್ಯಾಜ್ಯ ಸಂಗ್ರಹಣೆಗಾಗಿ ಮತತು ವಿಂಗಡಿತ ಘನ ತ್ಯಾಜ್ಯದ ನಡುವೆ ಯಾವುದೇ ಮಿಶ್ರಣವಿರುವುದಿಲ್ಲವೆಂದು ಖಾತ್ರಿ ಪಡಿಸುವ ಸಲುವಾಗಿ ಪ್ರತಿಯೊಂದು ವಾರ್ಡಿಗೆ ಹಂಚಿಕೆ ಮಾಡುವಂತಹ ವಾಹನಗಳು, ತಳ್ಳುಗಾಡಿಗಳು ಮತ್ತು ತ್ಯಾಜ್ಯ ಕೆಲಸಗಾರರುಗಳ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು.

6.9 ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕಾಲಕಾಲಕ್ಕೆ ನಿರ್ದಿಷ್ಟ ಪಡಿಸಬಹುದಾದ ಕ್ರಮದನ್ವಯ ತ್ಯಾಜ್ಯ ಕೆಲಸಗಾರರು ಮತ್ತು ವಾಹನಗಳು ಮತ್ತು ತ್ಯಾಜ್ಯೋತ್ಪಾದಕರ ಸಂಖ್ಯೆಯನ್ನು ಅನುಪಾತಿಕವಾಗಿ ಲೆಕ್ಕ ಮಾಡತಕ್ಕದ್ದು.

6.10 ವಿಂಗಡಿತ ಘನ ತ್ಯಾಜ್ಯವನ್ನು ಸಂಗ್ರಹಿಸುವ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ತ್ಯಾಜ್ಯೋತ್ಪಾದಕನೂ ಸಹ ಗ್ರಾಮ ಪಂಚಾಯಿತಿ ಮತ್ತು/ಅಥವಾ ಏಜೆನ್ಸಿಗೆ ಘನತ್ಯಾಜ್ಯವನ್ನು ಸಮರ್ಪಕವಾಗಿ ವಿಂಗಡಿಸಿ ಯುಕ್ತ ಧಾರಕಗಳಲ್ಲಿ ಸಂಗ್ರಹಿಸಿಡುವುದನ್ನು ಖಾತ್ರಿ ಪಡಿಸುವ ಮೂಲಕ ಮತ್ತು ಅದು ಗ್ರಾಮ ಪಂಚಾಯತಿ ಅಥವಾ ಏಜೆನ್ಸಿಯಿಂದ ಪ್ರಕಟಿಸಲಾದ ವೇಳಾ ಪಟ್ಟಿಯನ್ವಯ ಸಂಗ್ರಹ ಯೋಗ್ಯವಾಗಿದೆಯೆಂಬುದನ್ನು ಖಾತ್ರಿ ಪಡಿಸುವ ಮೂಲಕ ನೆರವು ನೀಡುವುದು ಪ್ರತಿಯೊಬ್ಬ ತ್ಯಾಜ್ಯೋತ್ಪಾದಕನ ಕರ್ತವ್ಯವಾಗಿರಕತಕ್ಕದ್ದು.

6.11 ಮನೆ ಮನೆಯಿಂದಲೂ ಘನ ತ್ಯಾಜ್ಯ ಸಂಗ್ರಹಣೆಯನ್ನು ಕೆಳಕಂಡ ವಿಧಾನದಲ್ಲಿ ಅನುಷ್ಠಾನಗೊಳಿಸತಕ್ಕದ್ದು;

(I) ಗ್ರಾಮ ಪಂಚಾಯತಿ ಅಥವಾ ಏಜೆನ್ಸಿಯು ನಿರ್ದಿಷ್ಟ ಪಡಿಸಿದ ಪ್ರದೇಶಗಳಲ್ಲಿ ಮನೆ ಮನೆಯಿಂದ ಸಂಗ್ರಹಣೆಗಾಗಿ ಬರುತ್ತಿರುವ ವಿಷಯವನ್ನು ಸಾರ್ವಜನಿಕವಾಗಿ ಪ್ರಕಟಿಸತಕ್ಕದ್ದು.

(II) ತ್ಯಾಜ್ಯೋತ್ಪಾದಕನು ಘನತ್ಯಾಜ್ಯವನ್ನು ನಿರ್ದಿಷ್ಟ ಪಡಿಸಿದ ಪ್ರದೇಶದಲ್ಲಿ ಅದು ಬಂದ ಕುಡಲೇ ಘನ ತ್ಯಾಜ್ಯವನ್ನು ಬಟವಾಡೆ ಮಾಡತಕ್ಕದ್ದು.

(III) ಒಂದುವೇಳೆ ತ್ಯಾಜ್ಯೋತ್ಪಾದಕನು ಘನ ತ್ಯಾಜ್ಯವನ್ನು ಬಟವಾಡೆ ಮಾಡಲು ಲಭ್ಯವಿರದಿದ್ದಲ್ಲಿ, ಅಂತಹ ತ್ಯಾಜ್ಯೋತ್ಪಾದಕನು ತ್ಯಾಜ್ಯವನ್ನು ವಿಂಗಡಿತ ವಿಧಾನದಲ್ಲಿಯೇ ಒಂದು ಪ್ರಮುಖವಾಗಿ ಕಣ್ಣಿಗೆ ಗೋಚರವಾಗುವಂತೆ ಇರಿಸತಕ್ಕದ್ದು ಮತ್ತು ಇದರಿಂದಾಗಿ ಗ್ರಾಮ ಪಂಚಾಯತಿ ಅಥವಾ ಏಜೆನ್ಸಿಗೆ ಘನತ್ಯಾಜ್ಯವನ್ನು ಸಂಗ್ರಹಿಸಲು ಸುಲಭವಾಗುತ್ತದೆ. ವಿಂಗಡಣೆ ಮಾಡಿದಂತಹ ಘನ ತ್ಯಾಜ್ಯಹವನ್ನು ಮುಚ್ಚದೆಯೇ ತೆರೆದಿಡತಕ್ಕದ್ದಲ್ಲ, ಏಕೆಂದರೆ ಅವು ಗಾಳಿ, ನೀರು ಅಥವಾ ಪ್ರಾಣಿಗಳಿಗ ತುತ್ತಾಗುವ ಸಾಧ್ಯತೆಯಿರುತ್ತದೆ.

6.12. ಸಂಗ್ರಹಣೆಯ ಮತ್ತು ಸಾಗಾಣಿಕೆಯ ಕಾಲದಲ್ಲಿ ವಿಂಗಡಿತ ತ್ಯಾಜ್ಯವನ್ನು ಬೆರೆಸತಕ್ಕದ್ದಲ್ಲ.

6.13. ಈ ರೀತಿಯಾಗಿ ಸಂಗ್ರಹಿಸಲಾದ ಜೈವಿಕ ವಿಘಟಿತ ತ್ಯಾಜ್ಯವನ್ನು ಎಸ್ ಡಬ್ಲ್ಯೂಎಂ ನಿಯಮಗಳು ಮತ್ತು / ಅಥವಾ ಅನ್ವಯವಾಗುವಂತಹ ಸಿಪಿಸಿಬಿ ಅಥವಾ ಕೆಎಸ್‌ಪಿಸಿಬಿ ಮಾರ್ಗಸೂಚಿಯನ್ನು ಪಾಲಿಸುವಂತಹ ಕಾಂಪೋಸ್ಟು ಘಟಕಗಳಿಗೆ, ಜೈವಿಕ ಮೆಥನೈಸೇಷನ್ ಸ್ಥಾವರಗಳು ಅಥವಾ ಇತರ ಯಾವುದೇ ಸಂಸ್ಕರಣಾ ಘಟಕಗಳಿಗೆ ಸಾಗಾಣಿಕೆ ಮಾಡತಕ್ಕದ್ದು.

6.14. ಜೈವಿಕ ಅವಿಘಟಿತ ತ್ಯಾಜ್ಯ ಮತ್ತು/ಅಥವಾ ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯ(ನೈರ್ಮಲ್ಯ ತ್ಯಾಜ್ಯವೂ ಒಳಗೊಂಡಂತೆ)ವನ್ನು ಗ್ರಾಮ ಪಂಚಾಯತಿಯ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಕ್ಕೆ ಅಥವಾ ಗ್ರಾಮ ಪಂಚಾಯಿತಿಯಿಂದ ಪದನಾಮಿತವಾದ ಇತರ ಯಾವುದೇ ಪ್ರಾಧೀಕರಿಸಲಾದ ಸ್ಥಳಕ್ಕೆ ಸಾಗಾಣಿಕೆ ಮಾಡತಕ್ಕದ್ದು.

6.15. ಘನ ತ್ಯಾಜ್ಯ ನಿರ್ವಹಣೆಯ ವಿವಿಧ ವರ್ಗಗಳನ್ನು ಉಪವಿಧಿಗಳ ಅಧ್ಯಾಯ VI ರಲ್ಲಿ ಉಪಬಂಧಗಳನ್ವಯ ಸಂಸ್ಕರಿಸತಕ್ಕದ್ದು.

## 7. ಸ್ಥಳದಿಂದ ಸ್ಥಳದಲ್ಲಿ ಘನ ತ್ಯಾಜ್ಯ ಸಂಗ್ರಹಣೆ

7.1 ಗ್ರಾಮ ಪಂಚಾಯತಿಯು ಮನೆ ಮನೆಯಿಂದಲೂ ಸಂಗ್ರಹಣೆಯನ್ನು ಅನುಷ್ಠಾನಗೊಳಿಸುವವರೆಗೆ, ಗ್ರಾಮ ಪಂಚಾಯತಿಯು, ಅಧಿಸೂಚನೆಯ ಮೂಲಕ ಕೆಲವು ಪ್ರದೇಶಗಳನ್ನು ಮತ್ತು ಸಂಗ್ರಹಣಾ ಸ್ಥಳಗಳನ್ನು ತನ್ನ ವ್ಯಾಪ್ತಿಯಲ್ಲಿ ಸ್ಥಳದಿಂದ ಸ್ಥಳದ ಸಂಗ್ರಹಣೆಗಾಗಿ ನಿಗದಿ ಪಡಿಸಬಹುದು, ಮತ್ತು ಇಂತಹ ಸ್ಥಳಗಳಲ್ಲಿ ತ್ಯಾಜ್ಯೋತ್ಪಾದಕರು ವಿಗಡಿತ ಘನ ತ್ಯಾಜ್ಯವನ್ನು ನೀಡುವರು.

## 8. ಘನ ತ್ಯಾಜ್ಯ ಸಾಗಾಣಿಕೆಗೆ ವಾಹನಗಳು

8.1. ಗ್ರಾಮ ಪಂಚಾಯತಿಗಳು ಆಟೋ ಟಿಪ್ಪರುಗಳು ಅಥವಾ ಪ್ರತ್ಯೇಕ ಬೋಗಿಗಳನ್ನು ಹೊಂದಿರುವಂತಹ ವಾಹನಗಳೂ ಸೇರಿದಂತೆ ಸೂಕ್ತ ವಾಹನಗಳನ್ನು ಜೈವಿಕೆ ವಿಘಟಿತ ತ್ಯಾಜ್ಯ, ಜೈವಿಕ ಅವಿಘಟಿತ ತ್ಯಾಜ್ಯ ಮತ್ತು ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯವನ್ನು ಸಾಗಾಣಿಕೆ ಮಾಡಲು ಘನ ತ್ಯಾಜ್ಯ ಸಂಗ್ರಹಣೆಗಾಗಿ ಪ್ರತ್ಯಾಯೋಜಿಸತಕ್ಕದ್ದು.

8.2 ವಿವಿಧ ವರ್ಗಗಳ ಘನ ತ್ಯಾಜ್ಯವನ್ನು ಸಾಗಾಣಿಕೆ ಮಾಡಲು ಮೂರು ಭೋಗಿಗಳುಳ್ಳ ವಾಹನವನ್ನು ಒದಗಿಸುವುದು ಸಾಧ್ಯವಾಗದಿದ್ದಲ್ಲಿ, ಜೈವಿಕ ವಿಘಟಿತ, ಜೈವಿಕ ಅವಿಘಟಿತ ತ್ಯಾಜ್ಯ ಮತ್ತು ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯವನ್ನು ಸಂಗ್ರಹಿಸಲು ವಿವಿಧ ವರ್ಗಗಳ ಘನ ತ್ಯಾಜ್ಯವನ್ನು ಬೆರೆಸಲಾಗುವುದಿಲ್ಲವೆಂದು ಖಾತ್ರಿ ಪಡಿಸಲು ವಿವಿಧ ದಿನಾಂಕಗಳನ್ನು ನಿಗದಿ ಪಡಿಸಬಹುದು.

8.3. ಘನ ತ್ಯಾಜ್ಯ ಸಾಗಾಣಿಕೆಗೆ ಬಳಕೆ ಮಾಡಲಾಗುವ ವಾಹನಗಳು ಯಾವ ರೀತಿಯಲ್ಲಿ ಮುಚ್ಚಿರಬೇಕೆಂದರೆ ಸಂಗ್ರಹಿಸಲಾದ ಘನ ತ್ಯಾಜ್ಯವು

(i)ಮುಕ್ತ ಪರಿಸರಕ್ಕೆ ತೆರೆದುಕೊಳ್ಳತಕ್ಕದ್ದಲ್ಲ ಅಥವಾ

(ii) ಸಾರ್ವಜನಿಕರ ಕಣ್ಣಿಗೆ ಗೋಚರವಾಗತಕ್ಕದ್ದಲ್ಲ ಮತ್ತು

(iii)ಸಾಗಾಣಿಕೆ ಮಾಡುವ ಸಂದರ್ಭದಲ್ಲಿ ಅದು ರಸ್ತೆಯ ಮೇಲೆ/ಅಥವಾ ತೆರೆದ ಪ್ರದೇಶಗಳಲ್ಲಿ ಚೆಲ್ಲತಕ್ಕದ್ದಲ್ಲ.

# ಅಧ್ಯಾಯ VI- ಘನ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ

## 9. ಗ್ರಾಮ ಪಂಚಾಯತಿಗಳ ವತಿಯಿಂದ ಒದಗಿಸಬೇಕಾದ ಶೌಲಭ್ಯಗಳು

### 9.1

(i) ಈ ಉಪವಿಧಿಗಳು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಗ್ರಾಮ ಪಂಚಾಯತಿಗಳು ವಿವಿಧ ವಿಧಗಳ ತ್ಯಾಜ್ಯದ ದಾಸ್ತಾನು ಮತ್ತು ಸಂಸ್ಕರಣೆಗಾಗಿ ಸೂಕ್ತ ಸ್ಥಳ(ಗಳನ್ನು) ಗುರುತಿಸತಕ್ಕದ್ದು.

(ii)ಗ್ರಾಮ ಪಂಚಾಯತಿಯು ಸ್ವಯಂ ತಾನೇ ಆಗಲೀ ಅಥವಾ ಏಜೆನ್ಸಿಯ ಮೂಲಕವಾಗಲೀ ಘನ ತ್ಯಾಜ್ಯ ಸಂಸ್ಕರಣಾ ಸೌಲಭ್ಯ ಕೇಂದ್ರಗಳು ಮತ್ತು ತತ್ಸಂಬಂಧಿತ ಮೂಲಸೌಲಭ್ಯಗಳನ್ನು ನಿರ್ಮಾಣ ಮಾಡತಕ್ಕದ್ದು, ಕಾರ್ಯಾಚರಣೆ ನಡೆಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(iii)ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕೆಎಸ್‌ಪಿಸಿಬಿ, ಸಿಪಿಸಿಬಿಗಳು ಮತ್ತು/ಅಥವಾ ಇತರ ಯಾವುದೇ ಯುಕ್ತ ಪ್ರಾಧಿಕಾರವು ಹೊರಡಿಸಿದ ಮಾರ್ಗಸೂಚಿಯಡಿಯಲ್ಲಿ ಸೂಚಿಸಿರುವ ತಂತ್ರಜ್ಞಾನವನ್ನು ಭೂ ಭರ್ತಿಗಳ ಬಳಕೆಯನ್ನು ಕಡಿತಗೊಳಿಸುವ ಸಲುವಾಗಿ ಬಳಕೆ ಮಾಡಿಕೊಳ್ಳತಕ್ಕದ್ದು.

(iv)ಈ ಸೌಲಭ್ಯಕೇಂದ್ರಗಳು ನೀರು ಪೂರೈಕೆ ಮತ್ತು ಶೌಚಾಲಯಗಳನ್ನೂ ಒಳಗೊಂಡಂತೆ, ಆರೋಗ್ಯ ಮತ್ತು ಪರಿಸರದ ಮೇಲೆ ಆಗುವ ವ್ಯತಿರಿಕ್ತ ಪರಿಣಾಮಗಳನ್ನು ನಿರ್ಬಂಧಿಸಲು ನೈರ್ಮಲ್ಯ ಪರಿಸ್ಥಿತಿಯನ್ನು ಖಾತ್ರಿ ಪಡಿಸುವ ಸಲುವಾಗಿ ಸಾಕಷ್ಟು ಸೌಕರ್ಯಗಳನ್ನು ಹೊಂದಿರತಕ್ಕದ್ದು.

(v)ಎಲ್ಲಾ ಸಂಸ್ಕರಣಾ ಸೌಲಭ್ಯ ಕೇಂದ್ರಗಳೂ ಸಹ ಹೆಚ್ಚುವರಿ ಗುಣಮಟ್ಟ, ಕೆಎಸ್‌ಪಿಸಿಬಿ, ಸಿಪಿಸಿಬಿ, ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು /ಅಥವಾ ಯುಕ್ತ ಪ್ರಾಧಿಕಾರಗಳು ಅಥವಾ ತತ್ಕಾಲಕ್ಕೆ

ಜಾರಿಯಲ್ಲಿರುವ ಇತರ ಯಾವುದೇ ಕಾಯಿದೆಯಡಿಯಲ್ಲಿ ನಿರ್ದಿಷ್ಟ ಪಡಿಸಿ ಅಧಿಸೂಚಿಸಿದಂತಹ ನಿರ್ದಿಷ್ಟತೆ ಮತ್ತು ಮಾರ್ಗಸೂಚಿಗಳನ್ನು ಪಾಲನೆ ಮಾಡತಕ್ಕದ್ದು.

## 9.2. ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳು

(i) ಗ್ರಾಮ ಪಂಚಾಯತಿಗಳು ಜೈವಿಕ ಅವಿಘಟಿತ ತ್ಯಾಜ್ಯದ ಸಂಗ್ರಹಣೆ ಮತ್ತು ವಿಂಗಡಣೆಯನ್ನು ಮಾಡುವ ಸಲುವಾಗಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ(ಗಳನ್ನು) ಸ್ವಯಂ ತಾನೇ ಆಗಲೀ ಅಥವಾ ಏಜೆನ್ಸಿಯ ಮೂಲಕವಾಗಲೀ ಒದಗಿಸತಕ್ಕದ್ದು, ಮತ್ತು ಅವುಗಳು ಈ ಉಪವಿಧಿಗಳು ಅಧಿಸೂಚಿಸಲ್ಪಟ್ಟ ಒಂದು ವರ್ಷದ ಅವಧಿಯೊಳಗೆ ಕಾರ್ಯಾಚರಣೆ ನಡೆಸತಕ್ಕದ್ದು.

(ii)ಗ್ರಾಮ ಪಂಚಾಯತಿಯು ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳಾಗಿ ಉಪಯೋಗಿಸಲು ಅಸ್ತಿತ್ವದಲ್ಲಿರುವ ಸೂಕ್ತ ಕಟ್ಟಡಗಳು ಅಥವಾ ಷೆಡ್ಡುಗಳನ್ನು ಗುರುತಿಸಬಹುದು.

(iii)ಪುನರಾವರ್ತಿತ ಜೈವಿಕ ಅವಿಘಟಿತ ತ್ಯಾಜ್ಯವನ್ನು ಒಣ ತ್ಯಾಜ್ಯ ನಿರ್ವಹಣಾ ಕೇಂದ್ರಗಳಿಂದ ಸಕ್ಷಮ ಪ್ರಾಧಿಕಾರದಿಂದ ಪ್ರಾಧೀಕರಿಸಲಾದ ತ್ಯಾಜ್ಯ ವ್ಯಾಪಾರಿಗಳಿಗೆ ಮತ್ತು/ಅಥವಾ ಮರು ಆವರ್ತಕರಿಗೆ ಮಾರಾಟ ಮಾಡತಕ್ಕದ್ದು.

(iv)ಪುನರಾವರ್ತಿಸಲಾರದ ಜೈವಿಕ ಅವಿಘಟಿತ ತ್ಯಾಜ್ಯ ಮತ್ತು ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯಗಳನ್ನು ಹೋಬಳಿ ಅಥವಾ ತಾಲ್ಲೂಕು ಮಟ್ಟದಲ್ಲಿ ಯುಕ್ತ ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಎಂದರೆ ತ್ಯಾಜ್ಯದಿಂದ ಇಂಧನ ತಂತ್ರಜ್ಞಾನ, ಸಿಮೆಂಟ್ ಸ್ಥಾವರಗಳಲ್ಲಿ ಸಹ –ಸಂಸ್ಕರಣೆ, ನೈರ್ಮಲ್ಯ ಭೂ ಭರ್ತಿಗಳಲ್ಲಿ ವಿಲೇವಾರಿ ಮತ್ತು ಕೆಎಸ್‌ಪಿಸಿಬಿ ಮತ್ತು/ಅಥವಾ ಸಿಪಿಸಿಬಿಯಿಂದ ನಿರ್ದಿಷ್ಟ ಪಡಿಸಲಾದ ಇತರ ಯಾವುದೇ ಸಂಸ್ಕರಣೆ/ವಿಲೇವಾರಿ ಕ್ರಮವನ್ನು ವಹಿಸತಕ್ಕದ್ದು.

## 9.3. ಜೈವಿಕ ವಿಘಟಿತ ತ್ಯಾಜ್ಯ ಸಂಸ್ಕರಣಾ ಘಟಕ

**(i) ಗ್ರಾಮ ಪಂಚಾಯತಿಯು** ಸ್ವಯಂ ತಾನೇ ಆಗಲೀ ಅಥವಾ ಏಜೆನ್ಸಿಯ ಮೂಲಕವಾಗಲೀ ಕಾಂಪೋಸ್ಟು ತಯಾರಿಕೆ, ಎರೆ ಹುಳ ಕಾಂಪೋಸ್ಟು ತಯಾರಿಕೆ, ಸೂಕ್ಷ್ಮ ಜೈವಿಕ ಕಾಂಪೋಸ್ಟು ತಯಾರಿಕೆ, ವಾಯು ಜೈವಿಕ ಕಾಂಪೋಸ್ಟು ತಯಾರಿಕೆ, (aerobic composting), ನಿರ್ವಾತ(ಯು) ಜೈವಿಕ ಕಾಂಪೋಸ್ಟು ತಯಾರಿಕೆ(anaerobic composting) ಜೈವಿಕ ಮಿಥೆನೈಸೇಷನ್ ಅಥವಾ ಕೆಎಸ್‌ಪಿಸಿಬಿ ಮತ್ತು /ಅಥವಾ ಸಿಪಿಸಿಬಿಯಿಂದ ಅನುಮೋದತವಾಗಿರುವ ಜೈವಿಕ ವಿಘಟಿತ ತ್ಯಾಜ್ಯದ ಸ್ಥಿರತೆಗಾಗಿ ಇತರ ಯಾವುದೇ ಸಂಸ್ಕರಣೆಗೆ ಅವಕಾಶವನ್ನು ಒದಗಿಸತಕ್ಕದ್ದು.

(II) ಈ ಉಪವಿಧಿಗಳು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಪ್ರತಿ ಗ್ರಾಮ ಪಂಚಾಯತಿಯಲ್ಲಿಯೂ ಸಹ ಸಂಸ್ಕರಣಾ ಘಟಕಗಳು ಕಾರ್ಯಾಚರಣೆಯನ್ನು ನಡೆಸತಕ್ಕದ್ದು.

## 9.4. ನೈರ್ಮಲ್ಯ ತ್ಯಾಜ್ಯದ ವಿಲೇವಾರಿ

(i) ಗ್ರಾಮ ಪಂಚಾಯತಿಯು ನೈರ್ಮಲ್ಯ ತ್ಯಾಜ್ಯವನ್ನು ಜೈವಿಕ–ವೈದ್ಯಕೀಯ ತ್ಯಾಜ್ಯದೊಂದಿಗೆ ಅತೀ ಸಮೀಪದ ಜೈವಿಕ ವೈದ್ಯಕೀಯ ಸಂಸ್ಕರಣಾ ಸೌಲಭ್ಯ ಕೇಂದ್ರ ಮತ್ತು/ಅಥವಾ ದಹನ ಕೇಂದ್ರಗಳಲ್ಲಿ ಸಂಸ್ಕರಿಸುವುದನ್ನು ಖಾತ್ರಿ ಪಡಿಸತಕ್ಕದ್ದು.

(ii) ಸಾಮಾನ್ಯ ಜೈವಿಕ ವೈದ್ಯಕೀಯ ಸಂಸ್ಕರಣೆ ಸೌಲಭ್ಯ ಕೇಂದ್ರ ಮತ್ತು/ಅಥವಾ ದಹನ ಕೇಂದ್ರಗಳು ಲಭ್ಯವಾಗುವವರೆಗೆ ಗ್ರಾಮ ಪಂಚಾಯತಿಯು ನೈಸರ್ಗಿಕ ತ್ಯಾಜ್ಯವನ್ನು ಸ್ಥಳೀಯ ದಹನ ಕೇಂದ್ರಗಳಲ್ಲಿ ಮತ್ತು/ಅಥವಾ ಸಿಪಿಸಿಬಿ, ಕೆಎಸ್‌ಪಿಸಿಬಿ ಮತ್ತು/ಅಥವಾ ಇತರ ಯಾವುದೇ ಸೂಕ್ತ ಪ್ರಾಧಿಕಾರವು ಹೊರಡಿಸಿದಂತಹ ಒಂದು ಯುಕ್ತ ಗುಣಮಟ್ಟದ ವಿಧಾನವನ್ನು ವಿಲೇವಾರಿ ಮಾಡತಕ್ಕದ್ದು.

## 9.5. ನೈಸರ್ಗಿಕ ಭೂ ಭರ್ತಿಗಳಲ್ಲಿ ವಿಲೇವಾರಿ

(i) ಗ್ರಾಮ ಪಂಚಾಯತಿಯು, ಸ್ವಯಂ ತಾನೇ ಆಗಲೀ ಅಥವಾ ಏಜೆನ್ಸಿಯ ಮೂಲಕವಾಗಲೀ ನೈರ್ಮಲ್ಯ ಭೂ ಭರ್ತಿಗಳನ್ನು ಮತ್ತು ತತ್ಸಂಬಂಧವಾದ ಮೂಲಭೂತ ಸೌಕರ್ಯಗಳನ್ನು ಉಳಿಕೆ ತ್ಯಾಜ್ಯವನ್ನು(ಎಂದರೆ ಉಪವಿಧಿಗಳ 9.3 ಮತ್ತು 9.4ರನ್ವಯ ಸಂಸ್ಕರಣ ಮಾಡಲು ಸಾಧ್ಯವಿರದಂತಹ) ಮತ್ತು ಜಡ ತ್ಯಾಜ್ಯಗಳನ್ನು ಎಸ್‌ಡಬ್ಲ್ಯೂಎಂ ನಿಯಮಗಳಲ್ಲಿ ನಿರ್ದಿಷ್ಟ ಪಡಿಸಿರುವ ಗುಣಮಟ್ಟದನ್ವಯ ವಿಲೇವಾರಿ ಮಾಡುವ ಸಲುವಾಗಿ ನಿರ್ಮಾಣ ಮಾಡತಕ್ಕದ್ದು, ಕಾರ್ಯಾಚರಣೆ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(ii) ಗ್ರಾಮ ಪಂಚಾಯತಿಗಳು ಮತ್ತು/ಅಥವಾ ಗ್ರಾಮ ಪಂಚಾಯತಿಗಳ ಸಮೂಹವು ನೈರ್ಮಲ್ಯ ಭೂ ಭರ್ತಿಗಳನ್ನು ಎಸ್‌ಡಬ್ಲ್ಯೂಎಂ ನಿಯಮಗಳ ಸಿಪಿಸಿಬಿ, ಕೆಎಸ್‌ಪಿಸಿಬಿ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು/ಅಥವಾ ಇತರ ಯಾವುದೇ ಸಕ್ಷಮ ಪ್ರಾಧಿಕಾರವು ಹೊರಡಿಸಿದಂತಹ ಮಾರ್ಗಸೂಚಿಗಳನ್ವಯ ಯುಕ್ತ ಕಾರ್ಯಸಾಧ್ಯತೆಯ ಅಧ್ಯಯನ ಮತ್ತಿತರ ಅಗತ್ಯ ಪರೀಕ್ಷೆಗಳು/ಪ್ರಾಯೋಗಿಕ ಯೋಜನೆಗಳನ್ನು ಕೈಗೊಂಡ ತರುವಾಯ ಸ್ಥಾಪಿಸತಕ್ಕದ್ದು, ಕಾರ್ಯಾಚರಣೆ ಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(iii) ಉಪವಿಧಿಗಳು 9.3 ಮತ್ತು 9.4ರಲ್ಲಿ ನಿರೂಪಿತವಾದ ಯಾವುದೇ ವಿಧಾನಗಳಲ್ಲಿ ಸಂಸ್ಕರಣ ಮಾಡಲಾಗದಂತಹ ಉಳಿಕೆ ತ್ಯಾಜ್ಯ ಮತ್ತು ಜಡ ತ್ಯಾಜ್ಯಗಳನ್ನು ವೈಜ್ಞಾನಿಕ ವಿಧಾನದಲ್ಲಿ ಭೂ ಭರ್ತಿಗಳಲ್ಲಿ ಗ್ರಾಮ ಪಂಚಾಯತಿಗಳು ವಿಲೇವಾರಿ ಮಾಡತಕ್ಕದ್ದು.

(iv) ಗ್ರಾಮ ಪಂಚಾಯತಿಗಳು ಭೂಭರ್ತಿಗಳಲ್ಲಿ ವಿಲೇವಾರಿ ಮಾಡಲಾದ ಘನತ್ಯಾಜ್ಯವು ಗ್ರಾಮ ಪಂಚಾಯತಿಯ ಭೌಗೋಳಿಕ ವ್ಯಾಪ್ತಿಯಲ್ಲಿ ಉತ್ಪಾದಿಸಲಾದ ಘನ ತ್ಯಾಜ್ಯದ ಶೇ 15%ನ್ನು ಮೀರತಕ್ಕದ್ದಲ್ಲವೆಂದು ಖಾತ್ರಿ ಪಡಿಸತಕ್ಕದ್ದು.

## 9.6. ಘನ ತ್ಯಾಜ್ಯವನ್ನು ತೆರೆದ ಸ್ಥಳಗಳಲ್ಲಿ ರಾಶಿ ಹಾಕುವುದು ಮತ್ತು ಸುಡುವುದಕ್ಕೆ ನಿಷೇಧ

ಘನ ತ್ಯಾಜ್ಯವನ್ನು ತೆರೆದ ಸ್ಥಳಗಳಲ್ಲಿ(ಮುಕ್ತ ಸ್ಥಳಗಳು) ರಾಶಿ ಹಾಕುವುದಾಗಲೀ ಅಥವಾ ಸುಡುವುದನ್ನಾಗಲೀ ನಿಷೇಧಿಸಲಾಗಿದೆ. ಗ್ರಾಮ ಪಂಚಾಯತಿಗಳು ಘನ ತ್ಯಾಜ್ಯವನ್ನು ತೆರೆದ ಸ್ಥಳಗಳಲ್ಲಿ ರಾಶಿ ಸುರಿಯುವ ಮತ್ತು ಸುಡುವ ಪ್ರಕ್ರಿಯೆಗಳ ಉದಾಹರಣೆಗಳನ್ನು ಕೆಳಕಂಡ ವಿಧಾನದಲ್ಲಿ ನಿರ್ವಹಿಸತಕ್ಕದ್ದು.

(i) ಗ್ರಾಮ ಪಂಚಾಯತಿಯು ಸಂಬಂಧ ಪಟ್ಟ ತ್ಯಾಜ್ಯೋತ್ಪಾದಕನಿಗೆ ಮತ್ತು/ಅಥವಾ ಸಂದರ್ಭಾನುಸಾರ ಆವರಣಗಳ ಸ್ವಾಧೀನಾನುಭವವನ್ನು ಹೊಂದಿರುವಂತಹ ವ್ಯಕ್ತಿಗೆ ಅಂತಹ ಆವರಣಗಳಲ್ಲಿ ಇರುವ ಯಾವುದೇ ತ್ಯಾಜ್ಯವನ್ನು ನೋಟೀಸಿನಲ್ಲಿ ನಮೂದಿಸಿದ ಸಮಯ ಮತ್ತು ವಿಧಾನದಲ್ಲಿ ಸ್ವಚ್ಛಗೊಳಿಸಬೇಕೆಂದು ಸೂಚಿಸಿ ನೋಟೀಸನ್ನು ಜಾರಿ ಮಾಡತಕ್ಕದ್ದು.

(ii) ಒಂದು ವೇಳೆ ಯಾವ ವ್ಯಕ್ತಿಯ ಮೇಲೆ ನೋಟೀಸನ್ನು ಜಾರಿ ಮಾಡಲಾಗಿದೆಯೋ, ಅಂತಹ ವ್ಯಕ್ತಿಯು ನೋಟೀಸಿನಲ್ಲಿ ವಿಧಿಸಿರುವ ಅಗತ್ಯಗಳನ್ನು ಪೂರೈಸಲು ವಿಫಲನಾದಲ್ಲಿ ಗ್ರಾಮ ಪಂಚಾಯತಿಯು ಕೆಳಕಂಡ ಎಲ್ಲಾ ಅಥವಾ ಯಾವುದೇ ಕ್ರಮವನ್ನು ಕೈಗೊಳ್ಳಬಹುದು.

  (ಎ)ಆವರಣವನ್ನು ಪ್ರವೇಶಿಸಿ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸತಕ್ಕದ್ದು ಮತ್ತು ಈ ರೀತಿ ಮಾಡಲು ಭರಿಸಿದ ವೆಚ್ಚವನ್ನು ಸಂಬಂಧ ಪಟ್ಟ ವ್ಯಕ್ತಿಯಿಂದ ವಸೂಲು ಮಾಡತಕ್ಕದ್ದು; ಅಥವಾ

  (ಬಿ) ಈ ಉಪವಿಧಿಗಳನ್ವಯ ಘನ ತ್ಯಾಜ್ಯವನ್ನು ರಾಶಿ ಹಾಕಿದ ಸಂಬಂಧ ದಂಡವನ್ನು ವಿಧಿಸತಕ್ಕದ್ದು.

**9.7 ಔದ್ಯೋಗಿಕ ಸುರಕ್ಷತೆ:** ಗ್ರಾಮ ಪಂಚಾಯತಿಯು ಘನ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಲ್ಲಿ ಒಳಗೊಳ್ಳುವಂತಹ ತ್ಯಾಜ್ಯ ತನ್ನ ಸ್ವಂತ ಹಾಗೂ ಏಜೆನ್ಸಿಯ ಸಿಬ್ಬಂದಿಗಳನ್ನೂ ಒಳಗೊಂಡಂತೆ ಅವರುಗಳಿಗೆ ಸಮವಸ್ತ್ರಗಳು, ಕೈ ಕವಚಗಳು, ರೈನ್ ಕೋಟುಗಳು, ಯುಕ್ತ ಬೂಟುಗಳು ಮತ್ತು ಮುಖವಾಡಗಳನ್ನು ಒಳಗೊಂಡಂತೆ ಯುಕ್ತ ಮತ್ತು ಸಾಕಷ್ಟು ಸುರಕ್ಷತಾ ಉಪಕರಣಗಳನ್ನು ವಿತರಿಸುವ ಮೂಲಕ ಅವರುಗಳ ಔದ್ಯೋಗಿಕ ಸುರಕ್ಷತೆಗಳನ್ನು ಘನ ತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರಿಗೆ ಖಾತ್ರಿ ಪಡಿಸತಕ್ಕದ್ದು ಮತ್ತು ಇವುಗಳನ್ನು ಕಾರ್ಯದಲ್ಲಿರುವ ಸಂದರ್ಭದಲ್ಲಿ ಬಳಕೆ ಮಾಡುವುದನ್ನು ಖಾತ್ರಿ ಪಡಿಸುವುದು.

# ಅಧ್ಯಾಯ VII- ಬೃಹತ್ ತ್ಯಾಜ್ಯೋತ್ಪಾದಕರುಗಳ ಗುರುತಿಸುವಿಕೆ ಮತ್ತು ಅವರುಗಳ ಹೊಣೆಗಾರಿಕೆ

## 10. ಬೃಹತ್ ತ್ಯಾಜ್ಯೋತ್ಪಾದಕರುಗಳ ಗುರುತಿಸುವಿಕೆ

### 10.1ಸಾರ್ವಜನಿಕ ನೋಟಿಸು ಮತ್ತು ಪರಿಶೀಲನೆ

(i) ಈ ಉಪವಿಧಿಗಳು ಜಾರಿಗೆ ಬಂದ ಮೂವತ್ತು ದಿವಸಗಳೊಳಗೆ, ಗ್ರಾಮ ಪಂಚಾಯತಿಯು **ಅನುಸೂಚಿ V** ರಲ್ಲಿ ನಿಗದಿ ಪಡಿಸಿದ ನಮೂನೆಯಲ್ಲಿ ಸಾರ್ವಜನಿಕ ನೋಟೀಸೊಂದನ್ನು ಜಾರಿಗೊಳಿಸಿ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದೆ ಬೃಹತ್ ತ್ಯಾಜ್ಯೋತ್ಪಾದಕರಿಗೆ ಅನ್ವಯವಾಗುವಂತಹ ಉಪಬಂಧಗಳ ಕುರಿತಂತೆ ಸಾರ್ವಜನಿಕರಿಗೆ ತಿಳುವಳಿಕೆಯನ್ನು ನೀಡತಕ್ಕದ್ದು.

(ii) ಅದರನ್ವಯ, ಗ್ರಾಮ ಪಂಚಾಯತಿಯು ತನ್ನದೇ ಆದ ದಾಖಲೆಗಳ ಪ್ರಕಾರ ವೈಯಕ್ತಿಕ ಬೃಹತ್ ತ್ಯಾಜ್ಯೋತ್ಪಾದಕರನ್ನು ಗುರುತಿಸುವ ಸಲುವಾಗಿ ಕ್ಷೇತ್ರ ಸರ್ವೆಯನ್ನು ನಡೆಸತಕ್ಕದ್ದು ಮತ್ತು **ಅನುಸೂಚಿ IV** ರಲ್ಲಿ ರೂಪಿಸಿರುವಂತಹ ನಮೂನೆಯಲ್ಲಿ ಅವರುಗಳಿಗೆ ಸೂಚನೆಗಳನ್ನು ಅಥವಾ ಈ ಉಪವಿಧಿಗಳಡಿಯಲ್ಲಿ ಅನ್ವಯವಾಗುವ ಉಪಬಂಧಗಳನ್ನು ಪಾಲನೆ ಮಾಡುವಂತೆ ಸೂಚಿಸತಕ್ಕದ್ದು.

10.2 **ಬೃಹತ್ ತ್ಯಾಜ್ಯೋತ್ಪಾದಕರುಗಳ ಹೊಣೆಗಾರಿಕೆಗಳು:** ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರುಗಳೂ ಸಹ:

(i) ಸಾಧ್ಯವಾದ ಮಟ್ಟಿಗೆ, ತಮ್ಮ ಆವರಣಗಳಲ್ಲಿ ಸ್ವತಃ ತಾವೇ ಜೈವಿಕ–ವಿಘಟಿತ ತ್ಯಾಜ್ಯವನ್ನು ನಿರ್ವಹಿಸತಕ್ಕದ್ದು ಮತ್ತು ತಮ್ಮದೇ ಆದ ವ್ಯವಸ್ಥೆಯಡಿಯಲ್ಲಿ ಜೈವಿಕ ಅವಿಘಟಿತ ತ್ಯಾಜ್ಯವನ್ನು ಈ ಉಪವಿಧಿಗಳನ್ವಯ ನಿರ್ವಹಿಸತಕ್ಕದ್ದು.

(ii) ಅವರುಗಳ ವಿಂಗಡಿಸಿದ ಘನ ತ್ಯಾಜ್ಯವನ್ನು ನೇರವಾಗಿ ಜೈವಿಕ ವಿಘಟಿತ ತ್ಯಾಜ್ಯ ಸಂಸ್ಕರಣಾ ಸೌಲಭ್ಯ ಕೇಂದ್ರಗಳಿಗೆ ನೇರವಾಗಿ ಎಸ್‌ಡಬ್ಲ್ಯೂಎಂ ನಿಯಮಗಳ ಬಳಕೆದಾರರ ಶುಲ್ಕವಾದ ಸಂಸ್ಕರಣಾ ಶುಲ್ಕವನ್ನು ಗ್ರಾಮ ಪಂಚಾಯತಿಗಲಿಗೆ ಪಾವತಿ ಮಾಡುವ ಮೂಲಕ ನೀಡತಕ್ಕದ್ದು ಮತ್ತು/ಅಥವಾ

(iii) **ಅನುಸೂಚಿ VI** ರಲ್ಲಿ ವಿಧಿಸಿರುವಂತಹ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕವನ್ನು ಪಾವತಿ ಮಾಡಿ ಉತ್ಪಾದನೆಯಾದ ಘನ ತ್ಯಾಜ್ಯದ ಮನೆ ಮನೆಯ ಸಂಗ್ರಹಣಾ ವ್ಯವಸ್ಥೆಯ ಭಾಗವಾಗಿ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಯ ಸಲುವಾಗಿ ಗ್ರಾಮ ಪಂಚಾಯತಿಯ ಸೇವೆಯನ್ನು ಪಡೆಯಬಹುದು.

10.3 ಈ ಉಪವಿಧಿಗಳಡಿಯಲ್ಲಿ ಗ್ರಾಮ ಪಂಚಾಯತಿಯ ಸೇವೆಯನ್ನು ಪಡೆಯದಂತಹ ಬೃಹತ್ ತ್ಯಾಜ್ಯೋತ್ಪಾದಕರುಗಳು ತನ್ನ ಆವರಣದಲ್ಲಿ ಉತ್ಪಾದಿಸಲಾದ ಮತ್ತು ಸಂಗ್ರಹಿಸಲಾದ, ಸಂಸ್ಕರಿಸಲಾದ ಮತ್ತು ವಿಲೇವಾರಿ ಮಾಡಲಾದ ಘನ ತ್ಯಾಜ್ಯ ಕುರಿತಂತೆ **ಅನುಸೂಚಿ III** ರಲ್ಲಿ ರೂಪಿಸಿರುವಂತಹ ನಮೂನೆಯಲ್ಲಿ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು.

# ಅಧ್ಯಾಯ VIII - ಬೀದಿ ಕಸ ಗುಡಿಸುವುದು ಮತ್ತು ಕಸ ಸುರಿಯುವುದರ ನಿಷೇಧ

## 11. ನಿಯಮಿತ ಸ್ವಚ್ಛಗೊಳಿಸುವಿಕೆ ಮತ್ತು ಬೀದಿ ಕಸ ಗುಡಿಸುವಿಕೆ

**11.1** ಗ್ರಾಮ ಪಂಚಾಯತಿಯು:

(i) ತನ್ನ ಅಧಿಕಾರ ವ್ಯಾಪ್ತಿಯಲ್ಲಿ, ಮಾರುಕಟ್ಟೆಗಳು, ಉದ್ಯಾನವನಗಳು, ಸಾರ್ವಜನಿಕ ರಸ್ತೆಗಳು ಮತ್ತು ತೋಟಗಳನ್ನು ಒಳಗೊಂಡಂತೆ, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು ಮತ್ತು ಸ್ವಚ್ಛತಾ ಕಾರ್ಮಿಕರ ಮೂಲಕ ನಿಯಮಿತವಾಗಿ ಬೀದಿ ಕಸ ಗುಡಿಸುವುದನ್ನು ಖಾತ್ರಿ ಪಡಿಸತಕ್ಕದ್ದು.

(ii) ಒಂದು ಅಧಿಸೂಚನೆಯ ಮೂಲಕ ವಾಹನಗಳ ಮತ್ತು ಜನಗಳ ದಟ್ಟಣೆ, ಜನಸಾಂದ್ರತೆ, ವಾಣಿಜ್ಯ ಚಟುವಟಿಕೆಗಳ ವ್ಯಾಪ್ತಿ, ಕಾರ್ಮಿಕರ ಕಲ್ಯಾಣ/ಸುರಕ್ಷತೆ ಯಾವುದೇ ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಪ್ರದೇಶಗಳ ಪರಿಸ್ಥಿತಿಯನ್ನು ಪರಿಗಣಿಸಿ ಬೀದಿ ಕಸ ಗುಡಿಸುವಿಕೆಯ ನಿರಂತರತೆ, ಸಮುದಾಯ ತೊಟ್ಟಿಗಳ ಅಳವಡಿಕೆಯ ಸ್ಥಳ

ಮತ್ತು ಸಂಬಂಧಿತ ಕಾರ್ಯ ಚಟುವಟಿಕೆಗಳನ್ನು ಕರ್ನಾಟಕ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಕಾಲಕಾಲಕ್ಕೆ ಅಧಿಸೂಚಿಸಿದ ಪ್ರಮಾಣಿತ ಗುಣಮಟ್ಟದಲ್ಲಿ ನಿಗದಿ ಪಡಿಸಿದಂತೆ ನಿರ್ಧರಿಸತಕ್ಕದ್ದು.

11.2

(i) ಗ್ರಾಮ ಪಂಚಾಯತಿಯು ಯುಕ್ತ ಮತ್ತು ಸಾಕಷ್ಟು ಸ್ವಚ್ಛತಾ ಉಪಕರಣಗಳು ಮತ್ತು ಸಾಧನಗಳಾದ ಪೊರಕೆಗಳು, ಮತ್ತು ಸಂಗ್ರಹಣಾ ತಟ್ಟೆಗಳನ್ನು ಇತರವುಗಳೊಂದಿಗೆ ಸ್ವಚ್ಛತಾ ಕಾರ್ಮಿಕರಿಗೆ ಒದಗಿಸತಕ್ಕದ್ದು.

(ii) ಈ ಬೀದಿ ಕಸ ಗುಡಿಸುವಿಕೆಯಿಂದ ಸಂಗ್ರಹಿಸಲಾದ ಘನ ತ್ಯಾಜ್ಯವನ್ನು ಅಗತ್ಯವಿದ್ದಲ್ಲಿ ವಿಂಗಡಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿಯು ಇವುಗಳ

(ಎ) ಜೈವಿಕ ವಿಘಟಿತ ತ್ಯಾಜ್ಯವನ್ನು ಅನುಕೂಲಕರವಾದ ಜೈವಿಕ ವಿಘಟಿತ ಸಂಸ್ಕರಣಾ ಸೌಲಭ್ಯ ಕೇಂದ್ರಕ್ಕೆ, ಮತ್ತು

(ಬಿ) ಜೈವಿಕ ಅವಿಘಟಿತ ತ್ಯಾಜ್ಯವನ್ನು ಡಿಡಬ್ಲ್ಯೂಸಿಸಿ ಮತ್ತು/ಅಥವಾ ಗ್ರಾಮ ಪಂಚಾಯತಿಯಿಂದ ಕಾಲಕಾಲಕ್ಕೆ ಅನುಸೂಚಿಸಬಹುದು ಇತರ ಯಾವುದೇ ಸೌಲಭ್ಯ ಕೇಂದ್ರಗಳಿಗೆ ಸಾಗಣೆ ಮಾಡಲು ಅನುವು ಮಾಡಿಕೊಡತಕ್ಕದ್ದು.

## 12. ಕಸ ಸುರಿಯುವುದಕ್ಕೆ ನಿಷೇಧ ಮತ್ತು ಸಮುದಾಯ ತೊಟ್ಟಿಗಳಿಗೆ ಅವಕಾಶ

12.1 **ಯಾರೇ** ವ್ಯಕ್ತಿಯು ಯಾವುದೇ ತ್ಯಾಜ್ಯವನ್ನು ಕೃಷಿ ಭೂಮಿಗಳು, ಆಟದ ಮೈದಾನಗಳು, ಸಾರ್ವಜನಿಕ ಸಾಮಾನ್ಯ ಸ್ಥಳಗಳು, ಬೀದಿಗಳು, ಮಾರುಕಟ್ಟೆ ಪ್ರದೇಶಗಳು, ಚರಂಡಿಗಳು ಮತ್ತು ಒಳಚರಂಡಿ ವ್ಯವಸ್ಥೆಗಳಲ್ಲಿ ಯಾವುದೇ ರೀತಿಯ ಜಲಮೂಲದಲ್ಲಿ(ನೈಸರ್ಗಿಕ ಅಥವಾ ಮಾನವ ನಿರ್ಮಿತ) ಅಥವಾ ಮುಕ್ತ ಪ್ರದೇಶಗಳಲ್ಲಿ, ಈ ಉಪವಿಧಿಗಳಲ್ಲಿ ಉಪಬಂಧಿಸಿದ ಅಥವಾ ಇತರ ಯಾವುದೇ ಅನ್ವಯವಾಗುವ ಕಾಯಿದೆಯಡಿಯಲ್ಲಿ ಉಪಬಂಧಿಸಿರುವ ವಿಧಾನವನ್ನು ಹೊರತುಪಡಿಸಿ ಎಸೆಯುವುದಾಗಲೀ, ರಾಶಿ ಹಾಕುವುದಾಗಲೀ ಅಥವಾ ಎಸೆಯುವುದಾಗಲೀ ಅಥವಾ ರಾಶಿ ಹಾಕಿಸುವುದಾಗಲೀ ಮಾಡತಕ್ಕದ್ದಲ್ಲ.

12.2.**ಸಾರ್ವಜನಿಕ ಸ್ಥಳಗಳಲ್ಲಿ ಸಮುದಾಯ ತೊಟ್ಟಿಗಳು**

(i) ಗ್ರಾಮ ಪಂಚಾಯತಿಗಳು ಸೂಕ್ತ ಸಮುದಾಯ ತೊಟ್ಟಿಗಳನ್ನು/ಧಾರಕಗಳನ್ನು ಸಾರ್ವಜನಿಕ ಸ್ಥಳಗಳಾದ ರಸ್ತೆಗಳು, ಸಾರ್ವಜನಿಕ ಬೀದಿಗಳು ಆಟದ ಮೈದಾನಗಳು, ಉದ್ಯಾನವನಗಳು, ಪ್ರವಾಸಿ ಸ್ಥಳಗಳು ಮತ್ತಿತರ ಅದೇ ಮಾದರಿಯ ಸ್ಥಳಗಳಲ್ಲಿ ಸ್ವಯಂ ತಾನೇ ಆಗಲೀ ಅಥವಾ ಏಜೆನ್ಸಿಯ ಮೂಲಕವಾಗಲೀ ಸಾರ್ವಜನಿಕರು ಕಸವನ್ನು ಹಾಕಲು ಅನುವಾಗುವಂತೆ ಒದಗಿಸತಕ್ಕದ್ದು.

(ii) ಗ್ರಾಮ ಪಂಚಾಯತಿ ಮತ್ತು/ಅಥವಾ ಏಜೆನ್ಸಿಯು ಸಮುದಾಯ ತೊಟ್ಟಿಗಳು/ಧಾರಕಗಳಲ್ಲಿ ಮೇಲೆ ಸುರಿಯುವಂತೆ ಅಥವಾ ಮುಕ್ತ ವಾತಾವರಣಕ್ಕೆ ತೆರೆದಿಡದಂತೆ ನಿರ್ವಹಿಸಲು ಖಾತ್ರಿ ಪಡಿಸತಕ್ಕದ್ದು ಮತ್ತು ಬಿಸಾಡಿ ಪ್ರಾಣಿಗಳು ಅಥವಾ ಪಕ್ಷಿಗಳಿಂದ ಅವುಗಳು ಹರಡುವುದನ್ನು ನಿರ್ಬಂಧಿಸತಕ್ಕದ್ದು.

(iii) ಜೈವಿಕ ವಿಘಟಿತ ಮತ್ತು ಜೈವಿಕ ಅವಿಘಟಿತ ತ್ಯಾಜ್ಯಗಳಿಗಾಗಿ ಪ್ರತ್ಯೇಕ ಸಮುದಾಯ ತೊಟ್ಟಿಗಳು/ಧಾರಕಗಳು ಇರತಕ್ಕದ್ದು.

# ಅಧ್ಯಾಯ IX - ಸಮಾರಂಭಗಳು ಮತ್ತು ಸಾರ್ವಜನಿಕ ಸೇರುವಿಕೆ

## 13.ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರ ಸೇರುವಿಕೆ ಮತ್ತು ಸಮಾರಂಭಗಳು

### 13.1 ಆಯೋಜಕರ ಹೊಣೆಗಾರಿಕೆಗಳು

(i) ಯಾವುದೇ ಲೈಸೆನ್ಸು ಹೊಂದಿರುವ ಅಥವಾ ಲೈಸೆನ್ಸು ಹೊಂದದಿರುವಂತಹ ಸ್ಥಳದಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಕಾರಣಕ್ಕಾಗಿ (ಮೆರವಣಿಗೆಗಳು, ವಸ್ತು ಪ್ರದರ್ಶನಗಳು, ಸರ್ಕಸ್, ಜಾತ್ರೆಗಳು, ರಾಜಕೀಯ ಸಭೆಗಳು, ವಾಣಿಜ್ಯ, ಧಾರ್ಮಿಕ, ಸಾಮಾಜಿಕ –ಸಾಂಸ್ಕೃತಿಕ ಸಮಾರಂಭಗಳು ಅಥವಾ ಮೆರವಣಿಗೆಗಳೂ ಒಳಗೊಂಡಂತೆ) ಒಂದು ನೂರಕ್ಕು ಹೆಚ್ಚಿನ ಸಂಖ್ಯೆಯ ಜನಗಳು ಸೇರುವಂತಹ ಸಮಾರಾಂಭಗಳು ಮತ್ತು ಸಾರ್ವಜನಿಕ ಸೇರುವಿಕೆಗಳ

ಆಯೋಜಕರು ಘನ ತ್ಯಾಜ್ಯವನ್ನು ಸಂಗ್ರಹಿಕೆ, ವಿಂಗಡಣೆ, ಮತ್ತು ಸಂಸ್ಕರಣೆಯನ್ನು ಈ ಉಪವಿಧಿಗಳನ್ವಯ ಅಂತಹ ಸಮಾರಂಭಗಳು ಮುಕ್ತಾಯವಾದ 24 ಗಂಟೆಯೊಳಗೆ ಮಾಡುವುದನ್ನು ಖಾತ್ರಿ ಪಡಿಸತಕ್ಕದ್ದು.

(ii) ಒಂದು ವೇಳೆ ಅಂತಹ ಸಮಾರಂಭಗಳ ಆಯೋಜಕರು ಅಂತಹ ಸಮಾರಂಭದ ಕಾರಣದಿಂದಾಗಿ ಉತ್ಪಾದನೆಯಾದ ಘನ ತ್ಯಾಜ್ಯದ ಸಂಗ್ರಹಣೆ, ಸ್ವಚ್ಛಗೊಳಿಸುವಿಕೆ, ಮತ್ತು ಸಾಗಾಣಿಕೆಗಾಗಿ ಗ್ರಾಮ ಪಂಚಾಯತಿಯು ಸಹಾಯವನ್ನು ಅಪೇಕ್ಷಿಸಿದಲ್ಲಿ, ಅವರು ಗ್ರಾಮ ಪಂಚಾಯತಿಯು ಅಂತಹ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಇ ಉದ್ದೇಶಕ್ಕಾಗಿ ಗ್ರಾಮ ಪಂಚಾಯತಿಯಿಂದ ನಿಗದಿ ಪಡಿಸುವ ಅವಶ್ಯಕ ಶುಲ್ಕವನ್ನು ಮುಂಗಡವಾಗಿ ಪಾವತಿ ಮಾಡತಕ್ಕದ್ದು.

### 13.2. ಮರುಪಾವತಿಸಬಹುದಾದ ಸ್ವಚ್ಛತಾ ಠೇವಣಿ

(i) ಸಾರ್ವಜನಿಕ ಸೇರುವಿಕೆ ಮತ್ತು ಸಮಾರಂಭಗಳ ಆಯೋಜಕರು, ಉಪವಿಧಿ 13.1ರಲ್ಲಿ ನಿರೂಪಿಸಿರುವಂತೆ, ಸೇರುವಿಕೆ ಅಥವಾ ಸಮಾರಂಭಕ್ಕೂ ಮುನ್ನ, ಗ್ರಾಮ ಪಂಚಾಯತಿಯಿಂದ ಸಮಾರಂಭದ ಪ್ರಮಾಣ ಮತ್ತು ಉತ್ಪಾದಿಸಲ್ಪಡಬಹುದಾದ ಘನ ತ್ಯಾಜ್ಯದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸಬಹುದಾದ ಅಂತಹ ಶುಲ್ಕವನ್ನು ಗ್ರಾಮ ಪಂಚಾಯತಿಯಲ್ಲಿ ಠೇವಣಿ ಇರಿಸಬಹುದು.

(ii)ಈ ಉಪವಿಧಿಯಡಿಯಲ್ಲಿ ಗ್ರಾಮ ಪಂಚಾಯತಿಯಲ್ಲಿ ಠೇವಣಿ ಇರಿಸಲಾದ ಯಾವುದೇ ಮೊತ್ತವು, ಸಮಾರಂಭದ ಮುಕ್ತಾಯದ ನಂತರ ಮತ್ತು ಸಮಾರಂಭದ ಕಾರಣದಿಂದಾಗಿ ಉತ್ಪಾದಿಸಲಾದ ಘನ ತ್ಯಾಜ್ಯವನ್ನು ಈ ಉಪವಿಧಿಗಳಡಿಯಲ್ಲಿ ವಿಂಗಡಿಸಲಾಗಿದೆ, ಸಂಗ್ರಹಿಸಲಾಗಿದೆ ಮತ್ತು ನಿಗದಿತ ಸ್ಥಳಗಳಿಗೆ ಸಾಗಿಸಲಾಗಿದೆ ಎಂದು ತೀರ್ಮಾನಿಸಿದ ತರುವಾಯ ಸದರಿ ಮೊತ್ತವನ್ನು ಮರುಪಾವತಿ ಮಾಡಬಹುದು.

(iii)ಸಮಾರಂಭವು ಮುಕ್ತಾಯವಾದ 24 ಗಂಟೆಗಳೊಳಗೆ ಸದರಿ ಸಾರ್ವಜನಿಕ ಸ್ಥಳವನ್ನು ಸ್ವಚ್ಛ ಸ್ಥಿತಿಗೆ ಮರುಸ್ಥಾಪಿಸದಿದ್ದಲ್ಲಿ, ಗ್ರಾಮ ಪಂಚಾಯತಿಗಳಿಗೆ ಪಾವತಿ ಮಾಡಲಾದ ಸ್ವಚ್ಛತಾ ಠೇವಣಿಯನ್ನು ಗ್ರಾಮ ಪಂಚಾಯತಿಯು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಈ ಉಪವಿಧಿಗಳನ್ವಯ ಆಯೋಜಕರಿಗೆ ದಂಡವನ್ನು ವಿಧಿಸತಕ್ಕದ್ದು.

## ಅಧ್ಯಾಯ X - ಘನ ತ್ಯಾಜ್ಯ ನಿರ್ವಹಣೆಗಾಗಿ ಬಳಕೆದಾರರ ಶುಲ್ಕ

### 14. ಗ್ರಾಮ ಪಂಚಾಯತಿಗಳಿಗೆ ಸಂದಾಯ ಮಾಡಬಹುದಾದ ಬಳಕೆದಾರರ ಶುಲ್ಕಕ್ಕೆ ಸಂಬಂಧಿಸಿದ ಉಪಬಂಧಗಳು

**14.1 ಗ್ರಾಮ** ಪಂಚಾಯತಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿಯು ಪಡೆದ ಬಳಕೆದಾರರ ಶುಲ್ಕವೂ ಸೇರಿದಂತೆ ತನ್ನದೇ ನಿಧಿಯ ಮೂಲಕ ಗ್ರಾಮ ಪಂಚಾಯತಿಯು ಈ ಉಪವಿಧಿಗಳನ್ನು ಅಳವಡಿಸಿಕೊಂಡ ಎರಡು ವರ್ಷಗಳ ಅವಧಿಯೊಳಗೆ ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಮಾಡತಕ್ಕದ್ದು.

**14.2**

(i) ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕವನ್ನು ತ್ಯಾಜ್ಯೋತ್ಪಾದಕನು ಗ್ರಾಮ ಪಂಚಾಯತಿಗಳಿಗೆ ಮತ್ತು/ಅಥವಾ ಸಂದರ್ಭಾನುಸಾರ ಏಜೆನ್ಸಿಗೆ ಘನ ತ್ಯಾಜ್ಯ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಯ ಸೇವೆಗಳಿಗಾಗಿ ಪಾವತಿ ಮಾಡತಕ್ಕದ್ದು.

(ii) ಈ ಉಪವಿಧಿಗಳ **ಅನುಸೂಚಿ VI** ರಲ್ಲಿ ನಿರ್ದಿಷ್ಟ ಪಡಿಸಿದಂತೆ ಎಸ್‌ಡಬ್ಲುಎಂ ಬಳಕೆದಾರರ ಶುಲ್ಕವನ್ನು ಪಾವತಿ ಮಾಡತಕ್ಕದ್ದು.

(iii) ತ್ಯಾಜ್ಯೋತ್ಪಾದಕನು ತನ್ನ ಜೈವಿಕ ವಿಘಟಿತ ತ್ಯಾಜ್ಯವನ್ನು, ಸಮುದಾಯ ಉಪಕ್ರಮ ಮತ್ತು/ಅಥವಾ ಇತರ ಯಾವುದೇ ವಿಧಾನದಲ್ಲಿ ಅನ್ವಯವಾಗುವ ಕಾಯಿದೆಯಂತೆ, ನಿರ್ವಹಿಸುತ್ತಿದ್ದಲ್ಲಿ, ಮತ್ತು ಆತನು ಅಂತಹ ತ್ಯಾಜ್ಯವನ್ನು ಸಂಸ್ಕರಣೆಗಾಗಿ ಗ್ರಾಮ ಪಂಚಾಯತಿಗೆ ಇಡದಿದ್ದಲ್ಲಿ ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕವನ್ನು ಅನುಪಾತಿಕವಾಗಿ ಇಳಿಕೆ ಮಾಡತಕ್ಕದ್ದು.

14.3 **ಅನುಸೂಚಿ VI** ರಲ್ಲಿ ನಮೂದಿಸಲಾದ ಬಳಕೆದಾರರ ಶುಲ್ಕವು ಸ್ವಯಂಚಾಲಿತವಾಗಿ ಪ್ರತಿ ವರ್ಷದ ಏಪ್ರಿಲ್ 1ನೇ ದಿನಾಂಕದಿಂದ ಪ್ರತಿ ಮೂರು ವರ್ಷಗಳಿಗೊಮ್ಮೆ ಶೇ 15% ರಷ್ಟು ಹೆಚ್ಚಳವಾಗತಕ್ಕದ್ದು (ಸಮೀಪದ ರೂ 10/-ಕ್ಕೆ

ಪೂರ್ಣಾಂಕಗೊಳಿಸತಕ್ಕದ್ದು). ಈ ದರಗಳನ್ನು ಗ್ರಾಮ ಪಂಚಾಯತಿಯ ಕಚೇರಿಯಲ್ಲಿ ಮತ್ತಿತರ ಸ್ಪಷ್ಟವಾಗಿ ಕಾಣುವ ಸಾರ್ವಜನಿಕ ಸ್ಥಳಗಳಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಪ್ರಕಟಿಸತಕ್ಕದ್ದು.

(i) ಎಸ್‌ಡಬ್ಲ್ಯೂಎಂಬಳಕೆದಾರರ ಶುಲ್ಕವನ್ನು ಗ್ರಾಮ ಪಂಚಾಯತಿಯಿಂದ ಖುದ್ದಾಗಿ ಅಥವಾ ಇತರ ಯಾವುದೇ ವಿಧಾನದಿಂದ ಮತ್ತು ಗ್ರಾಮ ಪಂಚಾಯತಿಯಿಂದ ನಿರ್ದಿಷ್ಟ ಪಡಿಸಬಹುದಾದ ಯಾವುದೇ ದಿನಾಂಕದಂದು, ಅದರಲ್ಲಿಯೂ ಪ್ರತಿ ತಿಂಗಳ ಮೊದಲನೆಯ ವಾರದಲ್ಲಿ ವಸೂಲು ಮಾಡತಕ್ಕದ್ದು.

(ii)ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕವನ್ನು ಗ್ರಾಮ ಪಂಚಾಯತಿ ವತಿಯಿಂದ ಅಧಿನಿಯಮದ ಉಪಬಂಧಗಳಡಿಯಲ್ಲಿ ಆಸ್ತಿ ತೆರಿಗೆಯಲ್ಲಿ ಅಥವಾ ಲೈಸೆನ್ಸು ಶುಲ್ಕದಲ್ಲಿ ಸೇರಿಸುವ ಮೂಲಕ ಸಂಗ್ರಹಿಸಬಹುದು.

(iii)ಗ್ರಾಮ ಪಂಚಾಯತಿಯು ಎಸ್‌ಡಬ್ಲ್ಯೂಎಂ ಶುಲ್ಕದ ಬಿಲ್ಲು ತಯಾರಿಕೆ/ಸಂಗ್ರಹಣೆ/ವಸೂಲಾತಿಗಾಗಿ ಕಾಲಕಾಲಕ್ಕೆ ಹೆಚ್ಚುವರಿ ತಂತ್ರವನ್ನು ಕಂಡು ಹಿಡಿಯಬಹುದು ಮತ್ತು ಇವುಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶ/ಅಧಿಸೂಚನೆಯ ಮೂಲಕ ಅನುಸೂಚಿಸತಕ್ಕದ್ದು.

14.5 ಗ್ರಾಮ ಪಂಚಾಯತಿಯು ಸ್ವಯಂ ತಾನೇ ಆಗಲೀ ಅಥವಾ ಏಜೆನ್ಸಿಯ ಮೂಲಕವಾಗಲೀ ಎಲ್ಲಾ ತ್ಯಾಜ್ಯೋತ್ಪಾದಕರುಗಳ ದತ್ತಾಂಶ ಸಂಗ್ರಹಣೆಯನ್ನು ಎಸ್‌ಡಬ್ಲ್ಯೂಎಂಬಳಕೆದಾರರ ಶುಲ್ಕ ವಸೂಲಾತಿಯ ಉದ್ದೇಶಗಳಿಗಾಗಿ ತಯಾರಿಸತಕ್ಕದ್ದು ಮತ್ತು ಸದರಿ ದತ್ತಾಂಶ ಸಂಗ್ರಹವನ್ನು ನಿಯಮಿತವಾಗಿ ಅಪ್‌ಡೇಟ್ ಮಾಡತಕ್ಕದ್ದು.

14.6. ಮೂರು ತಿಂಗಳಿಗೂ ಅಧಿಕ ಅವಧಿಗೆ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕ ಪಾವತಿ ಮಾಡಲು ವಿಫಲರಾದಲ್ಲಿ, ಗ್ರಾಮ ಪಂಚಾಯತಿಯಾಗಲೀ ಅಥವಾ ಇತರ ಯಾವುದೇ ಸಕ್ಷಮ ಪ್ರಾಧಿಕಾರವು ಈ ಅಧಿನಿಯಮದಡಿಯಲ್ಲಿ ತೆರಿಗೆ ವಂಚನೆ ಮಾಡಲಾಗಿದೆಯೆಂಬಂತೆ ವಿಫಲನಾದ ವ್ಯಕ್ತಿಯಿಂದ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕವನ್ನು ವಸೂಲು ಮಾಡಬಹುದು.

14.7. ಈ ಉಪವಿಧಿಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ ಸಹ, ಗ್ರಾಮ ಪಂಚಾಯತಿಯು ಈ ರೀತಿ ಪಾವತಿ ಮಾಡಲು ವಿಫಲನಾದ ವ್ಯಕ್ತಿಗೆ ಅಂತಹ ಎಸ್ ಡಬ್ಲ್ಯೂಎಂ ಬಳಕೆದಾರರ ಶುಲ್ಕವನ್ನು ಪಾವತಿ ಮಾಡುವವರೆಗೆ ಘನ ತ್ಯಾಜ್ಯ ನಿರ್ವಹಣಾ ಸೇವೆಗಳನ್ನು ಒದಗಿಸುವುದನ್ನು ಸ್ಥಗಿತಗೊಳಿಸಬಹುದು.

14.8 ಗ್ರಾಮ ಪಂಚಾಯತಿಯ ವತಿಯಿಂದ ಸಂಗ್ರಹಿಸಲಾದ ಎಲ್ಲಾ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕವನ್ನು ಘನ ತ್ಯಾಜ್ಯ ನಿರ್ವಹಣಾ ಸೇವೆಗಳನ್ನು ಒದಗಿಸಲು ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚಗಳಿಗಾಗಿ, ಸಿಬ್ಬಂದಿಗಳು ಮತ್ತು ಇತರ ತ್ಯಾಜ್ಯ ನಿರ್ವಹಣಾ ಸಂಬಂಧಿ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿರುವಂತಹವರ ವೇತನ ಪಾವತಿ ಮಾಡಲು ಕಾಲಕಾಲಕ್ಕೆ ಗ್ರಾಮ ಪಂಚಾಯತಿಯು ಪರಿಗಣಿಸಿದಂತೆ ವ್ಯಯ ಮಾಡಬಹುದು.

## ಅಧ್ಯಾಯ XI- ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಮೇಲ್ವಿಚಾರಣೆ

### 15. ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಉಪಬಂಧಗಳು

**15.1. ನಿಯತಕಾಲಿಕ ವರದಿಗಳು:** ಗ್ರಾಮ ಪಂಚಾಯತಿಯು ತನ್ನ ಕಾರ್ಯ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಸ್ಥಿತಿಗತಿ, ಪ್ರಗತಿ, ಕಾರ್ಯಾಚರಣೆಗಳ ವರದಿಯನ್ನು ನಿಯತಕಾಲಿಕವಾಗಿ ನಿರ್ವಹಣಾಧಿಕಾರಿ, ಮುಖ್ಯ ನಿರ್ವಹಣಾಧಿಕಾರಿ ಮತ್ತು ರಾಜ್ಯದ ಪ್ರಾಧಿಕಾರಗಳಿಗೆ ಕರ್ನಾಟಕ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆಯು ಹೊರಿಡಿಸುವ ಅಂತಹ ನಿರ್ದೇಶನದನ್ವಯ ಮತ್ತು ಅಂತಹ ನಮೂನೆಗಳಲ್ಲಿ ಸಲ್ಲಿಸತಕ್ಕದ್ದು.

**15.2.ಪರಿಶೋಧನೆಗಳು: ಸ್ವತಂತ್ರ** ಮೂರನೆಯ ಪಕ್ಷಕಾರರಿಂದ ಗ್ರಾಮ ಪಂಚಾಯತಿಯ ಸಾಮಾಜಿಕ ಪರಿಶೋಧನೆಯನ್ನೂ ಒಳಗೊಂಡಂತೆ ಗ್ರಾಮ ಪಂಚಾಯತಿಯು ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಪರಿಶೋಧನೆಯನ್ನು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಹೊರಡಿಸುವ ಮಾರ್ಗಸೂಚಿಯನ್ವಯ ಕೈಗೊಳ್ಳತಕ್ಕದ್ದು.

### 15.3. ಏಜೆನ್ಸಿಗಳ ಪರಿಶೀಲನೆ

(i) ಗ್ರಾಮ ಪಂಚಾಯತಿ ಮತ್ತು/ಅಥವಾ ಸರ್ಕಾರವು ನಿಯಮಿತವಾಗಿ ಏಜೆನ್ಸಿಯ ಸೌಲಭ್ಯಗಳು ಮತ್ತು ಕಾರ್ಯಾಚರಣೆಯನ್ನು ಅವುಗಳು ಎಸ್‌ಡಬ್ಲ್ಯೂಎಂ ನಿಯಮಗಳು, ಈ ಉಪವಿಧಿಗಳು ಮತ್ತು ಇತರ ವಿನಿಯಮಗಳ ಉಪಬಂಧಗಳನ್ನು ಪಾಲನೆ ಮಾಡುತ್ತಿವೆಯೆಂದು ಖಾತ್ರಿ ಪಡಿಸುವ ಸಲುವಾಗಿ ಅವುಗಳ ಸೌಲಭ್ಯಗಳು ಮತ್ತು ಕಾರ್ಯಾಚರಣೆಯನ್ನು ಪರಿಶೀಲಿಸತಕ್ಕದ್ದು.

(ii) ಒಂದು ವೇಳೆ ಯಾವುದೇ ಪಾಲನೆಯನ್ನು ಮಾಡಿರದಿದ್ದಲ್ಲಿ, ಗ್ರಾಮ ಪಂಚಾಯತಿ ಮತ್ತು/ಅಥವಾ ಸರ್ಕಾರವು ಅಂತಹ ವಿಫಲವಾಗುವ (ಪಾಲನೆ ಮಾಡದಿರುವಂತಹ) ಏಜೆನ್ಸಿಗಳ ವಿರುದ್ಧ ಈ ಉಪವಿಧಿಗಳಲ್ಲಿ ರೂಪಿತವಾಗಿರುವ ಪರಿಹಾರ ಕ್ರಮಗಳಿಗಾಗಿ ನೋಟೀಸು, ಘನ ತ್ಯಾಜ್ಯ ನಿರ್ವಹಣಾ ಸೇವೆಗಳ ರದ್ದತಿ, ಕಪ್ಪು ಪಟ್ಟಿಗೆ ಸೇರಿಸುವುದು, ಜುಲ್ಮಾನೆ ಮತ್ತು ದಂಡಗಳ ವಿಧಿಸುವಿಕೆ ಇತ್ಯಾದಿಗಳಿಗಾಗಿ ಕ್ರಮ ಕೈಗೊಳ್ಳಬಹುದು.

### 15.4. ವಿವರವಾದ ಯೋಜನಾ ವರದಿಗಳ ಮತ್ತು ಯೊಜನೆಗಳ ನಿಯಮಿತ ತಪಾಸಣೆಗಳು ಮತ್ತು ಪರಿಶೀಲನೆ

(i) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಸದಸ್ಯರುಗಳು ಮತ್ತಿತರ ಗ್ರಾಮ ಪಂಚಾಯತಿಯಿಂದ ಪ್ರಾಧೀಕರಿಸಲ್ಪಟ್ಟ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಗ್ರಾಮಗಳ ವಿವಿಧ ಭಾಗಗಳಲ್ಲಿ ಮತ್ತಿತರ ಘನತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿ ಸ್ಥಳಗಳಲ್ಲಿ ನಿಯಮಿತ ತಪಾಸಣೆಯನ್ನು ಮತ್ತು ಈ ಉಪವಿಧಿಗಳ ವಿವಿಧ ಉಪಬಂಧಗಳ ಪಾಲನೆಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

(ii) ಅಂತಹ ಅಧಿಕಾರಿಯು (ಗಳು) ಎಲ್ಲಾ ನ್ಯಾಯಸಮ್ಮತವಾದ ಸಮಯದಲ್ಲಿ, ಆತನು ಅಗತ್ಯವೆಂದು ಪರಿಗಣಿಸುವಂತಹ ನೆರವಿನೊಂದಿಗೆ ಯಾವುದೇ ಸ್ಥಳಕ್ಕಾದರೂ

(ಎ). ಆತನಿಗೆ ಈ ಉಪವಿಧಿಗಳಡಿಯಲ್ಲಿ ಗ್ರಾಮ ಪಂಚಾಯತಿಯು ವಹಿಸಿದಂತಹ ಯಾವುದೇ ಕರ್ತವ್ಯಗಳನ್ನು ನಿರ್ವಹಿಸುವ

(ಬಿ) ಈ ಉಪವಿಧಿಗಳ ಉಪಬಂಧಗಳ ಪಾಲನೆಯನ್ನು ನಿರ್ಧರಿಸುವ

15.5. **ನಿಗದಿತ (ಪದನಾಮಿತ) ಅಧಿಕಾರಿಗಳು:** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಇತರ ಪ್ರಾಧೀಕರಿಸಲ್ಪಟ್ಟ ಅಧಿಕಾರಿಗಳು ಕೆಳಕಂಡ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು

(i) ತ್ಯಾಜ್ಯೋತ್ಪಾದಕರ ಕುಂದುಕೊರತೆಗಳ ನಿವಾರಣೆ ಮತ್ತು ಉಪವಿಧಿಗಳ ಅನುಷ್ಠಾನದ ಸುಧಾರಣೆಗಾಗಿ ಸಲಹೆಗಳು

(ii) ಜುಲ್ಮಾನೆ ಮತ್ತು ದಂಡಗಳ ವಿಧಿಸುವಿಕೆ

(iii) ಎಸ್‌ಡಬ್ಲ್ಯೂಎಂಬಳಕೆದಾದರ ಶುಲ್ಕ; ಮತ್ತು

(iv) ಈ ಉಪವಿಧಿಗಳನ್ವಯ ನಿರ್ದಿಷ್ಟ ಪಡಿಸಲಾದ ಗ್ರಾಮ ಪಂಚಾಯತಿಯ ಹೊಣೆಗಾರಿಕೆಗಳ ಅನುಷ್ಠಾನ, ಮತ್ತು ಗ್ರಾಮ ಪಂಚಾಯತಿಗಳಿಂದ ಈ ಉಪವಿಧಿಗಳನ್ವಯ, ಅಧಿನಿಯಮ ಮತ್ತು ಇತರ ಯಾವುದೇ ಅನ್ವಯವಾಗುವ ಕಾಯಿದೆಯಡಿಯಲ್ಲಿ ವಹಿಸಲಾದ ಅಥವಾ ಪ್ರತ್ಯಾಯೋಜಿಸಲಾದ ಕರ್ತವ್ಯಗಳು.

## ಅಧ್ಯಾಯ – XII- ದಂಡನೆಗಳು ಮತ್ತು ಕುಂದುಕೊರತೆಗಳ ಪರಿಹಾರ

### 16. ದಂಡನೆಗಳು

16.1 ಯಾವುದೇ ವ್ಯಕ್ತಿಯಾದರೂ ಈ ಉಪವಿಧಿಗಳ ಉಪಬಂಧಗಳನ್ನು ಪಾಲನೆ ಮಾಡದೆ ಉಲ್ಲಂಘಿಸಿದಲ್ಲಿ ಅಥವಾ ವಿಫಲನಾದಲ್ಲಿ, **ಅನುಸೂಚಿ VII** ರಲ್ಲಿ ನಿರ್ದಿಷ್ಟ ಪಡಿಸಿರುವಂತೆ ಗ್ರಾಮ ಪಂಚಾಯತಿಯ ವತಿಯಿಂದ ವಿಧಿಸಲಾದ ದಂಡವನ್ನು ಪಾವತಿ ಮಾಡುವ ಶಿಕ್ಷೆಗೆ ಒಳಪಡತಕ್ಕದ್ದು.

16.2 ಒಂದು ವೇಳೆ ಎರಡನೆಯ ಬಾರಿಗೆ ಉಲ್ಲಂಘನೆ ಅಥವಾ ಪಾಲನೆ ಮಾಡದಿದ್ದಲ್ಲಿ, **ಅನುಸೂಚಿ –VII** ರಲ್ಲಿ ನಿಗದಿ ಪಡಿಸಿದ ದಂಡ ಮೊತ್ತದ ಎರಡು ಪಟ್ಟು ಮೊತ್ತವನ್ನು ಜುಲ್ಮಾನೆಯಾಗಿ ವಿಧಿಸಲು ಗ್ರಾಮ ಪಂಚಾಯತಿಯು ಅಧಿಕಾರವನ್ನು ಹೊಂದಿರತಕ್ಕದ್ದು.

16.3 ಒಂದು ವೇಳೆ ಮೂರನೆಯ ಬಾರಿಗೆ ಉಲ್ಲಂಘನೆ ಅಥವಾ ಪಾಲನೆ ಮಾಡದಿದ್ದಲ್ಲಿ, **ಅನುಸೂಚಿ –VII** ರಲ್ಲಿ ನಿಗದಿ ಪಡಿಸಿದ ದಂಡ ಮೊತ್ತದ ಮೂರು ಪಟ್ಟು ಮೊತ್ತವನ್ನು ಜುಲ್ಮಾನೆಯಾಗಿ ವಿಧಿಸಲು ಗ್ರಾಮ ಪಂಚಾಯತಿಯು ಅಧಿಕಾರವನ್ನು ಹೊಂದಿರತಕ್ಕದ್ದು.

16.4 ಮೂರನೆಯ ಬಾರಿಗೆ ಉಲ್ಲಂಘನೆಯಾದ ತರುವಾಯ ಮತ್ತೊಮ್ಮೆ ಯಾವುದೇ ಉಲ್ಲಂಘನೆ ಅಥವಾ ಅನುಪಾಲನೆಯಾಗದಿದ್ದಲ್ಲಿ, ಗ್ರಾಮ ಪಂಚಾಯತಿಯು ತ್ಯಾಜ್ಯೋದಕನು ಹೊಂದಿರುವಂತಹ ಯಾವುದೇ(ಯಾವುದಾದರೂ ಇದ್ದಲ್ಲಿ) ಯುಕ್ತ ವ್ಯಾಪಾರಿ ಲೈಸೆನ್ಸನ್ನು ವಜಾಗೊಳಿಸುವ ಅಧಿಕಾರವನ್ನು ಹೊಂದಿರತಕ್ಕದ್ದು, ಅಧಿನಿಯಮದಲ್ಲಿ ರೂಪಿಸಿರುವ ಇತರ ಯಾವುದೇ ದಂಡದ ಮೊತ್ತವನ್ನು ವಸೂಲು ಮಾಡತಕ್ಕದ್ದು ಮತ್ತು/ಅಥವಾ ಕಾಲಕಾಲಕ್ಕೆ ಅಧಿಸೂಚಿಸಿದಂತೆ ಇತರ ಯಾವುದೇ ಕ್ರಮವನ್ನು ಕೈಗೊಳ್ಳಬಹುದು.

16.5 **ಅನುಸೂಚಿ VII** ರಲ್ಲಿ ನಮೂದಿಸಿರುವಂತಹ ಜುಲ್ಮಾನೆ ಅಥವಾ ದಂಡವು ಪ್ರತಿ ಮುಂದಿನ ಅನುಸರಣೆಯ ವರ್ಷದ ದಿನಾಂಕ ಏಪ್ರಿಲ್ 1 ರಿಂದ ಸ್ವಯಂಚಾಲಿತವಾಗಿ ವರ್ಷಕ್ಕೆ ಶೇ 10%ರಂತೆ (ಅತಿ ಸಮೀಪದ ರೂ 10/–ಕ್ಕೆ ಪೂರ್ಣಾಂಕಗೊಳಿಸತಕ್ಕದ್ದು) ಏರಿಕೆಯಾಗತಕ್ಕೆದ್ದು.

16.6. ಗ್ರಾಮ ಪಂಚಾಯತಿಯು ಈ ಉಪವಿಧಿಗಳ **ಅನುಸೂಚಿ VI** ರಲ್ಲಿ ನಮೂದಿಸಿರುವಂತಹ ನಮೂದುಗಳನ್ನು ಅನ್ವಯವಾಗುವ ಕಾಯಿದೆಯಡಿಯಲ್ಲಿ ಮಾರ್ಪಾಡು ಮಾಡಬಹುದು, ಅಥವಾ ತಿದ್ದುಪಡಿ ಮಾಡಬಹುದು ಅಥವಾ ವಿಭಿನ್ನವಾದ ದರವನ್ನು ವಿಧಿಸಬಹುದು, ಆದರೆ ಅವುಗಳು **ಅನುಸೂಚಿ VII** ರಲ್ಲಿ ನಮೂದಿಸಿರುವ ಮೊತ್ತಕ್ಕಿಂತ ಕಡಿಮೆಯಾಗತಕ್ಕದ್ದಲ್ಲ.

16.7 ಗ್ರಾಮ ಪಂಚಾಯತಿಯು ತನ್ನ ಸಿಬ್ಬಂದಿಗಳ ಪೈಕಿ ಯಾರೇ ಆದರೂ ಸಂಗ್ರಹಣೆ, ಅಥವಾ ಸಾಗಣೆಯಲ್ಲಿ ವಿಂಗಡಣೆ ಮಾಡುವ ಹಂತದಲ್ಲಿ ಘನ ತ್ಯಾಜ್ಯವನ್ನು ಯಾವುದೇ ಸಮಯದಲ್ಲಿ ಬೆರೆಸಿದಲ್ಲಿ, ನಿಗದಿ ಪಡಿಸಿದ ಸಮಯದಲ್ಲಿ ಘನತ್ಯಾಜ್ಯವನ್ನು ಸಂಗ್ರಹಿಸಲು ವಿಫಲನಾದಲ್ಲಿ, ಅಥವಾ ಅನ್ಯಥಾ ಈ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ, ತನ್ನ ಸಿಬ್ಬಂದಿಗಳ ವಿರುದ್ಧ ಅಥವಾ ಏಜೆನ್ಸಿ ಅಥವಾ ತ್ಯಾಜ್ಯ ಕಾರ್ಮಿಕರ ವಿರುದ್ಧ ಗ್ರಾಮ ಪಂಚಾಯತಿಯು ಶಿಸ್ತು ಕ್ರಮವನ್ನು ಜರುಗಿಸಬಹುದು.

16.8 ಏಜೆನ್ಸಿಯು ಈ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಪಾಲನೆ ಮಾಡಲು ವಿಫಲವಾದಲ್ಲಿ, ಗ್ರಾಮ ಪಂಚಾಯಿತಿಯು ಕೆಳಕಂಡ ಯವುದೇ ಅಥವಾ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು.

(i) ಏಜೆನ್ಸಿಗೆ ನೀಡಲಾಗಿರುವ ಯಾವುದೇ ಘನತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ ಅಥವಾ ಸಂಸ್ಕರಣಾ ಸೌಲಭ್ಯಗಳಿಗಾಗಿ ಈ ಉಪವಿಧಿಗಳಡಿಯಲ್ಲಿ ಮತ್ತು/ಅಥವಾ ಅನ್ವಯವಾಗುವ ವಿನಿಯಮಗಳಡಿಯಲ್ಲಿ ಮಂಜೂರು ಮಾಡಿರುವಂತಹ ಲೈಸೆನ್ಸುಗಳನ್ನು ಅಮಾನತ್ತಿನಲ್ಲಿಡಬಹುದು ಅಥವಾ ರದ್ದು ಪಡಿಸಲೂ ಬಹುದು.

(II) ಯುಕ್ತ ಕರಾರಿನನ್ವಯ ಏಜೆನ್ಸಿಗೆ ನೀಡಲಾಗಿರುವ ಘನ ತ್ಯಾಜ್ಯ ನಿರ್ವಹಣಾ ಸೇವೆಗಳನ್ನು ರದ್ದುಪಡಿಸುವಿಕೆ ಅಥವಾ

16.9 ಗ್ರಾಮ ಪಂಚಾಯತಿಯು ಈ ಉಪವಿಧಿಗಳ ಯಾವುದೇ ಉಪಬಂಧಗಳ ಅಥವಾ ಇತರ ಯಾವುದೇ ಕಾಯಿದೆಗಳ ಉಲ್ಲಂಘನೆಗೆ ಅಧಿನಿಯಮದಡಿಯಲ್ಲಿ, ಪರಿಸರ(ಸಂರಕ್ಷಣಾ) ಅಧಿನಿಯಮ, 1986, ಭಾರತೀಯ ದಂಡ ಸಂಹಿತೆ, 1860, ಜಲ (ಮಾಲಿನ್ಯ ನಿರ್ಬಂಧ ಮತ್ತು ನಿಯಂತ್ರಣ) ಅಧಿನಿಯಮ, 1974, ವಾಯು(ಮಾಲಿನ್ಯ ನಿರ್ಬಂಧ ಮತ್ತು ನಿಯಂತ್ರಣ) ಅಧಿನಿಯಮ, 1981 ಮತ್ತು/ಅಥವಾ ಇತರ ಯಾವುದೇ ಅನ್ವಯವಾಗುವ ವಿನಿಯಮಗಳೂ ಒಳಗೊಂಡಂತೆ ಈ ಉಪವಿಧಿಗಳಡಿಯಲ್ಲಿ, ಸೂಕ್ತ ನಡಾವಳಿಗಳನ್ನು ಉಪಕ್ರಮಿಸಬಹುದು.

16.10. ಈ ರೀತಿಯಾಗಿ ಸಂಗ್ರಹಿಸಲಾದ ಎಲ್ಲಾ ದಂಡಗಳನ್ನು ಈ ಉಪವಿಧಿಗಳನ್ವಯ ಘನ ತ್ಯಾಜ್ಯ ನಿರ್ವಹಣಾ ಸೇವೆಗಳನ್ನು ಒದಗಿಸುವ ಸಲುವಾಗಿ ಗ್ರಾಮ ಪಂಚಾಯತಿಯ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳಿಗಾಗಿ, ಸಿಬ್ಬಂದಿಗಳ ವೇತನ, ಪ್ರೋತ್ಸಾಹಕಗಳು ಮತ್ತಿತರ ತ್ಯಾಜ್ಯ ನಿರ್ವಹಣಾ ಕಾರ್ಯಚಟುವಟಿಕೆಗಳಿಗೆ ಗ್ರಾಮ ಪಂಚಾಯತಿಯು ಕಾಲಕಾಲಕ್ಕೆ ಸೂಕ್ತವೆಂದು ಪರಿಗಣಿಸಿದಂತೆ ಬಳಕೆ ಮಾಡಬಹುದು.

17 **ಕುಂದುಕೊರತೆಗಳ ಪರಿಹಾರ**

**17.1**

**(i)** ಗ್ರಾಮ ಪಂಚಾಯತಿಯು ಘನತ್ಯಾಜ್ಯ ಸಂಗ್ರಹಣೆ ಮಾಡದಿರುವುದು ಅಥವಾ ಇನ್ನಿತರವುಗಳೊಂದಿಗೆ ಈ ಉಪವಿಧಿಗಳ ಉಲ್ಲಂಘನೆ ಕುರಿತಾದ ದೂರುಗಳನ್ನು ನೋಂದಣಿ ಮಾಡಿಕೊಳ್ಳುವ ಸಲುವಾಗಿ ಸಾರ್ವಜನಿಕ ಕುಂದುಕೊರತೆಗಳ ಪರಿಹಾರ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸತಕ್ಕದ್ದು.

(ii) ಈ ವ್ಯವಸ್ಥೆಗಳು ಪ್ರತಿಯೊಂದು ಗ್ರಾಮದಲ್ಲಿಯೂ ಮತ್ತು/ಅಥವಾ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ಒಂದು ದೂರು ಕೇಂದ್ರ, ಮೊಬೈಲ್ ಆಪ್, ಮತ್ತು/ಅಥವಾ ಇತರ ತಂತ್ರಗಳನ್ನು ಗ್ರಾಮ ಪಂಚಾಯತಿಯು ಸ್ಥಳೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತವೆಂದು ಪರಿಗಣಿಸಿದ ತಂತ್ರವನ್ನು ಒಳಗೊಂಡಿರಬಹುದು.

(iii)ಯಾರೇ ವ್ಯಕ್ತಿಯು ಕುಂದುಕೊರತೆಗಳನ್ನು ಖುದ್ದಾಗಿ, ದೂರವಾಣಿ ಮೂಲಕ, ಮಿಂಚಂಚೆ ಮೂಲಕ/ವೆಬ್‌ಸೈಟ್ ಮೂಲಕ, ಅಂಚೆ ಮೂಲಕ ಮೊಬೈಲ್ ಆಪ್ ಮೂಲಕ ಮತ್ತು ಅಥವಾ ಗ್ರಾಮ ಪಂಚಾಯತಿಯು ಯುಕ್ತವೆಂದು ನಿರ್ಧರಿಸಿದ ಇತರ ಯಾವುದೇ ಮಾರ್ಗದಿಂದ ಸಲ್ಲಿಸಬಹುದು.

17.2. (i) ಗ್ರಾಮ ಪಂಚಾಯತಿಯು ಪ್ರತಿಯೊಂದು ಕುಂದುಕೊರತೆಯೂ ಸಹ ಕಾಲಾವಧಿಯಲ್ಲಿ ಮತ್ತು ದಕ್ಷ ವಿಧಾನದಲ್ಲಿ ಪರಿಹರಿಸಲ್ಪಡುತ್ತದೆಯೆಂದು ಖಾತ್ರಿ ಪಡಿಸತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿಯೂ ದೂರು ಸಲ್ಲಿಸಿದ ಹದಿನೈದು ದಿನಗಳಿಗಿಂತ ಹೆಚ್ಚಿನ ವಿಳಂಬವಾಗತಕ್ಕದ್ದಲ್ಲ.

(ii) ಗ್ರಾಮ ಪಂಚಾಯತಿಯು ಕುಂದುಕೊರತೆಗೆ ಸೂಕ್ತ ಪರಿಹಾರಾತ್ಮಕ ಕ್ರಮವನ್ನು ನಿರ್ಧರಿಸುವ ಸಂದರ್ಭದಲ್ಲಿ ಕುಂದುಕೊರತೆಯ ವಿಧ, ಪರಿಸರ ಮತ್ತು/ಅಥವಾ ಆರೋಗ್ಯ ಸಂಬಂಧಿ ಪರಿಣಾಮಗಳು, ಸಾರ್ವಜನಿಕರಿಗೆ ಉಂಟಾದ ಅನಾನುಕೂಲತೆ, ಇದಕ್ಕೆ ಹೊಂದಿಕೊಂಡ ಹಣಕಾಸು ವೆಚ್ಚಗಳು ಮತ್ತಿತರ ಯುಕ್ತ ಅಂಶಗಳನ್ನು ಪರಿಗಣಿಸತಕ್ಕದ್ದು.

## ಅಧ್ಯಾಯ XIII- ಗ್ರಾಮ ಪಂಚಾಯತಿಯ ಇತರ ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳು

**18.** ಈ ಉಪವಿಧಿಗಳ ಇನ್ನಿತರ ಅಧ್ಯಾಯಗಳಲ್ಲಿ ನಿರ್ದಿಷ್ಟ ಪಡಿಸಿರುವ ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳೊಂದಿಗೆ ಗ್ರಾಮ ಪಂಚಾಯತಿಗಳು ಕೆಳಕಂಡ ಹೆಚ್ಚುವರಿ ಕರ್ತವ್ಯಗಳನ್ನು ಸಹ ಹೊಂದಿರತಕ್ಕದ್ದು.

18.1 **ಪ್ರಚಾರ ಮತ್ತು ಸಾರ್ವಜನಿಕ ಮಾಹಿತಿ ಸೇವೆಗಳು**

**(i)** ಗ್ರಾಮ ಪಂಚಾಯತಿಗಳು ಉಪವಿಧಿಗಳ ಉಪಬಂಧಗಳಿಗೆ ನೈರ್ಮಲ್ಯ ಪ್ರೇರಕರ, ಸಮುದಾಯ ಆಧಾರಿತ ಸಂಘಟನೆಗಳ ಅಂತಹ ವ್ಯಕ್ತಿಗತ ಸಂವಹನದ ಮೂಲಕ, ಮತ್ತು ಫಲಕಗಳು(ಸೈನ್ ಬೋರ್ಡುಗಳು), ಕರ ಪತ್ರಗಳು, ಬಾನುಲಿ, ವೃತ್ತ ಪತ್ರಿಕೆಗಳು ಇನ್ನಿತರ ಸೂಕ್ತ ಮಾಧ್ಯಮಗಳ ಮೂಲಕ ಪ್ರಚಾರವನ್ನು ನೀಡತಕ್ಕದ್ದು, ಇದರಿಂದಾಗಿ ಎಲ್ಲಾ ನಾಗರೀಕರು ಸಹ ಗ್ರಾಮ ಪಂಚಾಯತಿಗಳ ಕರ್ತವ್ಯ ಕುರಿತಾದ ಅರಿವು ಮತ್ತು ವಿಂಗಡಣೆ, ಮರುಆವರ್ತನೆ, ಕಸ ಸುರಿಯುವಿಕೆ, ತೊಂದರೆ, ದಂಡನೆಗಳು ಮತ್ತು ಜುಲ್ಮಾನೆಗಳ ಕುರಿತಂತೆ ತಮ್ಮ ಕರ್ತವ್ಯದ ಬಗ್ಗೆಯೂ ಸಹ ತಿಳುವಳಿಕೆಯನ್ನು ಹೊಂದುವರು.

(ii) ಗ್ರಾಮ ಪಂಚಾಯತಿಯು ಸಮುದಾಯ ಹಂತದಲ್ಲಿ ವಿಂಗಡಣೆ, ಕಾಂಪೋಸ್ಟು ತಯಾರಿಕೆ, ಜೈವಿಕ ಅನಿಲ ಉತ್ಪಾದನೆ, ಮರುಆವರ್ತನೆ ಮತ್ತು ಋತುಚಕ್ರ ನೈರ್ಮಲ್ಯ ನಿರ್ವಹಣೆ ಕುರಿತಂತೆ ತರಬೇತಿ ಕಾರ್ಯಕ್ರಮಗಳು, ವಿಚಾರಸಂಕಿರಣಗಳು ಮತ್ತು ಕಾರ್ಯಾಗಾರಗಳನ್ನು ಆಯೋಜಿಸುವ ಮೂಲಕ ಮಾಹಿತಿಯನ್ನು ಒದಗಿಸತಕ್ಕದ್ದು.

**18.2. ಪಾರದರ್ಶಕತೆ ಮತ್ತು ಸಾರ್ವಜನಿಕ ಸಂಪರ್ಕ ಸಾಧಿಸುವುದು: ಅತಿ ಹೆಚ್ಚಿನ** ಮಟ್ಟದ ಪಾರದರ್ಶಕತೆ ಮತ್ತು ಸಾರ್ವಜನಿಕರಿಗೆ ನಿಲುಕುವ ಸಾಧ್ಯತೆಯನ್ನು ಖಾತ್ರಿ ಪಡಿಸುವ ಸಲುವಾಗಿ, ಗ್ರಾಮ ಪಂಚಾಯತಿಯು ಈ ಉಪವಿಧಿಗಳಡಿಯಲ್ಲಿ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೆಳಕಂಡ ಮಾಹಿತಿಗಳು, ದತ್ತಾಂಶ ಮತ್ತು ವರದಿಗಳನ್ನು ಗ್ರಾಮ ಪಂಚಾಯತಿ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಲಭ್ಯಗೊಳಿಸತಕ್ಕದ್ದು.

(i) ಈ ಉಪವಿಧಿಗಳಡಿಯಲ್ಲಿ ನಿರ್ದಿಷ್ಟ ಪಡಿಸಲಾದ ಗ್ರಾಮ ಘಮಚಾಯತಿಯ ಜವಾಬ್ದಾರಿಗಳನ್ನು ಅನುಷ್ಠಾನಗೊಳಿಸುವಂತಹ ಹೊಣೆಗಾರಿಕೆಯನ್ನು ಹೊಂದಿರುವ ಅಧಿಕಾರಿಗಳ ಹೆಸರು ಮತ್ತು ಸಂಪರ್ಕ

(ii) ಸಂಗ್ರಹಿಸಲಾದ ಮತ್ತು ಸಂಸ್ಕರಿಸಲಾದ ಘನ ತ್ಯಾಜ್ಯದ ಪ್ರಮಾಣ ಕುರಿತ ವಾರ್ಷಿಕ ದತ್ತಾಂಶ

(iii) ದೂರುಗಳ ಕುರಿತಂತೆ ಮತ್ತು ದೂರುಗಳಿಗೆ ಪರಿಹಾರ ಒದಗಿಸುವ ಕುರಿತಂತೆ ಗ್ರಾಮ ಪಂಚಾಯತಿಗಳಿಂದ ವಹಿಸಲಾದ ಕ್ರಮ ಕುರಿತಾದ ಅಂಕಿ ಅಂಶ

(iv) ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕ, ಗ್ರಾಮ ಪಂಚಾಯತಿಯಿಂದ ಮತ್ತು ಅದರ ಪರವಾಗಿ ವಸೂಲು ಮಾಡಲಾದ ದಂಡದ ಮೊತ್ತ ಮತ್ತು ಈ ಮೊತ್ತವನ್ನು ಮಾಹೆಯಾನ ಬಳಕೆ ಮಾಡಲಾದ ವಿಧಾನ ಕುರಿತಾದ ವಿವರಗಳು

### 18.3 **ಪ್ರೋತ್ಸಾಹಕಗಳ ಸೃಜನೆ**

**(i)** ಗ್ರಾಮ ಪಂಚಾಯತಿಯು ಜೈವಿಕ ವಿಘಟಿತ ತ್ಯಾಜ್ಯಗಳಾದ ಜೈವಿಕ ಮಿಥೆನೈಸೇಷನ್ ಮತ್ತು ಕಾಂಪೋಸ್ಟು ತಯಾರಿಕೆಯಂತಹ ಸಂಸ್ಕರಣಾ ವಿಕೇಂದ್ರೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಂಡ ಸಂದರ್ಭದಲ್ಲಿ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕವನ್ನು ಮನ್ನಾ ಮಾಡುವ ಯುಕ್ತ ತ್ಯಾಜ್ಯೋತ್ಪಾದಕರುಗಳನ್ನು ಗುರುತಿಸುವ ಮತ್ತು ಅವರುಗಳಿಗೆ ಪ್ರಮಾಣ ಪತ್ರವನ್ನು ವಿತರಿಸುವ ಮತ್ತು ಅವರುಗಳ ಹೆಸರನ್ನು ಗ್ರಾಮ ಪಂಚಾಯತಿ ಕಚೇರಿಯಲ್ಲಿ ಪ್ರಕಟಿಸುವಂತಹ ಪ್ರೋತ್ಸಾಹಕ ವ್ಯವಸ್ಥೆಯನ್ನು ಸೃಜಿಸಬಹುದು.

(ii) ಗ್ರಾಮ ಪಂಚಾಯತಿಯು ಲಭ್ಯವಿದ್ದಲ್ಲಿ, ಹೆಚ್ಚುವರಿ ಕಾಂಪೋಸ್ಟನ್ನು ತ್ಯಾಜ್ಯೋತ್ಪಾದಕನಿಂದ ಕಾಲಕಾಲಕ್ಕೆ ಗ್ರಾಮ ಪಂಚಾಯತಿಯಿಂದ ಅನುಸೂಚಿಸಿದಂತೆ ನಿರ್ದಿಷ್ಟ ಪಡಿಸಿದ ದರದಲ್ಲಿ ತನ್ನ ಸ್ವಂತ ಉಪಯೋಗಕ್ಕಾಗಿ ಅಥವಾ ಉತ್ತಮ ಬೆಲೆಗೆ ಮಾರಾಟ ಮಾಡುವ ಸಲುವಾಗಿ ಖರೀದಿಸಬಹುದು.

### 18.4. **ತರಬೇತಿ ಮತ್ತು ಸಾರ್ವಜನಿಕ ಅರಿವು(ತಿಳುವಳಿಕೆ)**

(i) **ಗ್ರಾಮ ಪಂಚಾಯತಿಯು** ಸ್ವಯಂ ತಾನೇ ಆಗಲೀ ಅಥವಾ ಈ ಕ್ಷೇತ್ರದ ತಜ್ಞರುಗಳ ಮೂಲಕವಾಗಲೀ ಅರಿವು ಮೂಡಿಸುವ ಮತ್ತು ಸಂಸ್ಥೆಗಳನ್ನು ತೊಡಗಿಸುವ ಮೂಲಕ ಘನ ತ್ಯಾಜ್ಯನಿರ್ವಹಣೆ ಘನ ತ್ಯಾಜ್ಯದಲ್ಲಿ ಇಳಿಕೆ ಮತ್ತು ಕಡಿಮೆ ಮಾಡುವಿಕೆ, ಕುಂದುಕೊರತೆಗಳ ನಿವಾರಣಾ ತಂತ್ರಗಳ ಕುರಿತಂತೆ ಈ ಉಪವಿಧಿಗಳಡಿಯಲ್ಲಿ ಅರಿವು ಮೂಡಿಸತಕ್ಕದ್ದು.

(ii) ಗ್ರಾಮ ಪಂಚಾಯತಿಗಳು ಪ್ಲಾಸ್ಟಿಕ್ ಚೀಲಗಳ ನಿಷೇಧ ಮತ್ತಿತರ ವಸ್ತುಗಳ ಕುರಿತಂತೆ ರಾಜ್ಯ ಸರ್ಕಾರವು ಹೊರಡಿಸಿದ ಕುರಿತಂತೆ ಪ್ರಚಾರ ನೀಡುವ ಮೂಲಕ ಘನ ತ್ಯಾಜ್ಯ ಉತ್ಪಾದನೆಯನ್ನು ಇಳಿಕೆ ಮಾಡಲು ಅರಿವು ಮೂಡಿಸುವ ಕಾರ್ಯಕ್ರಮಗಳ ಮೂಲಕ ಮತ್ತು ಪ್ರೋತ್ಸಾಹಕಗಳಿಗೆ ಅವಕಾಶವನ್ನು ಒದಗಿಸುವ ಮೂಲಕ ಏಕ ಬಳಕೆ ವಿಲೇವಾರಿ ಉತ್ಪನ್ನಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ಪ್ರೋತ್ಸಾಹಿಸತಕ್ಕದ್ದಲ್ಲ.

## ಅಧ್ಯಾಯ XIII- ಇತರೆ

**19**. **ಸರ್ಕಾರಿ ಸಂಸ್ಥೆಗಳೊಂದಿಗೆ ಸಮನ್ವಯ:** ಗ್ರಾಮ ಪಂಚಾಯತಿಯು ಇತರ ಸರ್ಕಾರೆ ಏಜೆನ್ಸಿಗಳು ಮತ್ತು ಪ್ರಾಧಿಕಾರಗಳೊಂದಿಗೆ, ಅಂತಹ ಸಂಸ್ಥೆಗಳ ಅಧಿಕಾರ ವ್ಯಾಪ್ತಿ ಪ್ರದೇಶಗಳಲ್ಲಿ ಅಥವಾ ಈ ಸಂಸ್ಥೆಗಳ ನಿಯಂತ್ರಣದಲ್ಲಿರುವ ಪ್ರದೇಶಗಳಲ್ಲಿ ಈ ಉಪವಿಧಿಗಳ ಪಾಲನೆಯನ್ನು ಖಾತ್ರಿ ಪಡಿಸುವ ಸಲುವಾಗಿ ಸಮನ್ವಯವನ್ನು ಸಾಧಿಸತಕ್ಕದ್ದು.

20. **ಅನುಷ್ಠಾನದ ಪರಿಶೀಲನೆ :** ಗ್ರಾಮ ಪಂಚಾಯತಿಯು ಈ ಉಪವಿಧಿಗಳ ಅನುಷ್ಠಾನವನ್ನು ಕನಿಷ್ಟ ವರ್ಷಕ್ಕೆ ಎರಡು ಬಾರಿ ಪರಿಶೀಲಿಸತಕ್ಕದ್ದು ಮತ್ತು ಘನ ತ್ಯಾಜ್ಯ ನಿರ್ವಹಣಾ ಯೋಜನೆಯಡಿಯಲ್ಲಿ ಪರಿಣಾಮಕಾರಿ ಅನುಷ್ಠಾನ ಮತ್ತು ಅದರ ಒರೆಗಲ್ಲುಗಳ ನಿರ್ವಹಣೆಗಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

21. **ತಿದ್ದುಪಡಿಗಳು: -**ಗ್ರಾಮಪಂಚಾಯತಿಗಳು, ಅಧಿನಿಯಮದ ಯುಕ್ತ ವಿಧಿವಿಧಾನಗಳನ್ನು ಅನುಸರಿಸಿ, ಆ ರೀತಿ ಮಾಡುವುದು ಅನಿವಾರ್ಯವಾದಲ್ಲಿ, ಸರ್ಕಾರದ ಪೂರ್ವಾನುಮತಿಯೊಂದಿಗೆ ಈ ಉಪವಿಧಿಗಳನ್ನು ತಿದ್ದುಪಡಿ ಮಾಡಬಹುದು ಮತ್ತು ಅದಕ್ಕೆ ಸೇರ್ಪಡೆ ಮಾಡಬಹುದು.

### 22. ಆದೇಶಗಳ ನಿರಸನ ಮತ್ತು ಉಳಿಸುವಿಕೆ

**22.1** **ಈ ಉಪವಿಧಿಗಳು** ಜಾರಿಗೆ ಬಂದ ತರುವಾಯ, ಅನ್ವಯವಾಗುವಂತಹ ನಿಯಮಗಳು/ವಿನಿಯಮಗಳನ್ವಯ ಯಾವುದೇ ಕ್ರಮವನ್ನು, ಅಂತಹ ಕ್ರಮಗಳು ಈ ಉಪವಿಧಿಗಳನ್ನು ಉಲ್ಲಂಘಿಸದ ಹೊರತು ಕೈಗೊಳ್ಳಬಹುದು.

**********

# ಅನುಸೂಚಿ –1

**ಜೈವಿಕ ವಿಘಟಿತ ತ್ಯಾಜ್ಯ, ಜೈವಿಕ ಅವಿಘಟಿತ ತ್ಯಾಜ್ಯ, ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯ ಮತ್ತು ನೈರ್ಮಲ್ಯ ತ್ಯಾಜ್ಯಗಳ ವಿಶಧೀಕೃತ ಪಟ್ಟಿ**

## ಭಾಗ –ಎ ಜೈವಿಕ ವಿಘಟಿತ ತ್ಯಾಜ್ಯಗಳ ವಿಶಧೀಕೃತ ಪಟ್ಟಿ

#ಹಣ್ಣುಗಳು ಮತ್ತು ತರಕಾರಿಗಳ ಸಿಪ್ಪೆಗಳೂ ಒಳಗೊಂಡಂತೆ, ಅಡುಗೆ ಕೋಣೆ/ಮಾರುಕಟ್ಟೆ ತ್ಯಾಜ್ಯಗಳು,ಸೇವಿಸದೇ ಬಿಟ್ಟ ಮತ್ತು/ಅಥವಾ ಹಳಸಿದ ಆಹಾರ, ಚಹಾ ಸೊಪ್ಪುಗಳು ಮತ್ತು ಮೊಟ್ಟೆಯ ಮೊಟ್ಟೆಯ ಚಿಪ್ಪುಗಳು(ಮೇಲು ಸಿಪ್ಪೆ)

# ಮಾಂಸ ಮತ್ತು ಎಲುಬುಗಳು

# ಹೂಗಳೂ ಒಳಗೊಂಡಂತೆ ಎಲೆಯ ಕಸ(ತ್ಯಾಜ್ಯ)

# ತೆಂಗಿನ ಚಿಪ್ಪುಗಳು

# ಮರ/ಎಲೆಗಳ ಬೂದಿಗಳು

## ಭಾಗ –ಬಿ–ಜೈವಿಕ ಅವಿಘಟಿತ ಪುನರಾವರ್ತನ ತ್ಯಾಜ್ಯಗಳ ವಿಶದೀಕೃತ ಪಟ್ಟಿ

# ವರ್ತಮಾನ ಪತ್ರಿಕೆಗಳು

# ಕಾಗದ, ಪುಸ್ತಕಗಳು ಮತ್ತು ನಿಯತಕಾಲಿಕಗಳು

# ಗಾಜು

# ಲೋಹದ ವಸ್ತುಗಳು ಮತ್ತು ತಂತಿಗಳು

# ಪ್ಲಾಸ್ಟಿಕ್

# ಅಲ್ಯೂಮಿನಿಯಮ್ ಕ್ಯಾನುಗಳು

#ಮರ/ಪೀಠೋಪಕರಣಗಳು

# ಪ್ಯಾಕೇಜ್ ವಸ್ತುಗಳು

# ಬಟ್ಟೆಗಳು

# ಸ್ಟೈರೋಫೋಮ್

# ಥರ್ಮೋಕೋಲ್

## ಭಾಗ ಸಿ–ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯಗಳ ವಿಶದೀಕೃತ ಪಟ್ಟಿ

## ಭಾಗ ಸಿ: 1 – ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯಗಳ ವಿಶಧೀಕೃತ ಪಟ್ಟಿ

# ಏರೋಸಾಲ್ ಕ್ಯಾನುಗಳು

# ಮನೆಗಳ ಅಡುಗೆಕೋಣೆ ಮತ್ತು ಮೋರಿ ಸ್ವಚ್ಛಗೊಳಿಸುವ ವಸ್ತುಗಳು

# ಬ್ಯಾಟರಿಗಳು, ಎಣ್ಣೆ ಶೋಧಕಗಳು (oil filters) ಮತ್ತು ಕಾರುಗಳ ಸ್ವಚ್ಛತೆಯ ಉತ್ಪನ್ನಗಳು ಮತ್ತು ಬಳಕೆ ವಸ್ತುಗಳು

# ಎಣ್ಣೆಗಳು, ರಾಸಾಯನಿಕಗಳು ಮತ್ತು ಕರಗುವ ವಸ್ತುಗಳು ಮತ್ತು ಅವುಗಳ ಖಾಲಿ ಡಬ್ಬಿಗಳು

# ಅಲಂಕಾರಿಕ ವಸ್ತುಗಳು, ರಾಸಾಯನಿಕ ಆಧಾರಿತ ಕೀಟನಾಶಕಗಳು ಮತ್ತು ಅವುಗಳ ಖಾಲಿ ಡಬ್ಬಗಳು

# ಅವಧಿ ಮುಗಿದ ಔಷಧಗಳೂ ಒಳಗೊಂಡಂತೆ ಔಷಧಗಳು

# ಬಣ್ಣಗಳು, ಎಣ್ಣೆಗಳು, ಕೀಲೆಣ್ಣೆ, ಅಂಟುಗಳು (glues) ,ತೆಳುದ್ರಾವಕ ಮತ್ತು ಅವುಗಳ ಖಾಲಿ ಡಬ್ಬಗಳು

# ಕೀಟನಾಶಕಗಳು ಮತ್ತು ಸಸ್ಯನಾಶಕಗಳು (herbicides) ಮತ್ತು ಅವುಗಳ ಖಾಲಿ ಡಬ್ಬಗಳು

# ಛಾಯಾಗ್ರಹಣದ ರಾಸಾಯನಿಕಗಳು

# ಥರ್ಮಾಮೀಟರು ಮತ್ತು ಪಾದರಸವನ್ನು ಹೊಂದಿರುವ ಉತ್ಪನ್ನಗಳು

**ಭಾಗ ಸಿ 2–ನೈರ್ಮಲ್ಯ ತ್ಯಾಜ್ಯದ ವಿಶದೀಕೃತ ಪಟ್ಟಿ**

# **ಬಳಕೆ ಮಾಡಿದ ಡಯಾಪರುಗಳು**

# **ಸ್ಯಾನಿಟರಿ ಟವಲುಗಳು ಅಥವಾ ನ್ಯಾಪ್‌ಕಿನ್ನುಗಳು, ಋತುಸ್ರಾವದಲ್ಲಿ ಬಳಕೆ ಮಾಡಲಾದ ಬಟ್ಟೆಗಳು ಮತ್ತು ಶಾರೀರಿಕ ದ್ರವಗಳನ್ನು** ಒಳಗೊಂಡಂತಹ ಅದೇ ಮಾದರಿಯ ವಸ್ತುಗಳು

#. ಗರ್ಭನಿರೋಧಕ ಚೀಲಗಳು

# ಬ್ಯಾಂಡ್ ಐಡ್, ಗೃಹಬಳಕೆಯ ಗವಸುಗಳು ಮತ್ತು ಕೊಳಕು ಹತ್ತಿ

# ಮನೆಗಳಿಂದ ಸಿರಂಜುಗಳು

-------

**ಅನುಸೂಚಿ –111 ಗ್ರಾಮ ಪಂಚಾಯತಿಯ ಸೇವೆಯನ್ನು ಬಳಕೆ ಮಾಡಿಕೊಳ್ಳದಂತಹ ಬೃಹತ್ ತ್ಯಾಜ್ಯೋತ್ಪಾದಕನಿಂದ ಸಲ್ಲಿಸ ಬೇಕಾದ ವಾರ್ಷಿಕ ವರದಿಯ ನಮೂನೆ**

| ಕ್ರಮ ಸಂ | ಶೀರ್ಷಿಕೆ | ವಿವರಗಳು |
|---|---|---|
| 1. | **ಬೃಹತ್** ತ್ಯಾಜ್ಯೋತ್ಪಾದಕನ ಹೆಸರು ಮತ್ತು ವಿಳಾಸ<br>ದೂರವಾಣಿ ಸಂ; | |
| 2 | **ಬೃಹತ್ ತ್ಯಾಜ್ಯೋತ್ಪಾದಕನ ಮಾದರಿ(ವಿಧ)**<br>**ವಾಣಿಜ್ಯ** ಅಂಗಡಿ ಅಥವಾ ಸ್ಥಾಪನೆ/ಕಲ್ಯಾಣ ಮಂಟಪಗಳು/ಪೂಜಾ ಸ್ಥಳಗಳು/ಶಿಕ್ಷಣ ಸಂಸ್ಥೆಗಳು/ಶಾಲೆ, ಕಾಲೇಜುಗಳು ಮತ್ತು ಸಂಶೋಧನಾ ಸಂಸ್ಥೆಗಳು/ಸರ್ಕಾರಿ ಕಚೇರಿಗಳು, ನ್ಯಾಯಾಲಯಗಳು, ಸ್ಥಳೀಯ, ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಸ್ವಾಧೀನಾನುಭವವನ್ನು ಹೊಂದಿರುವಂತಹ ಮತ್ತಿತರ ಆವರಣಗಳು/ ಇತರ ಯಾವುದೇ ವಿಧದ ಬೃಹತ್ ತ್ಯಾಜ್ಯೋತ್ಪಾದಕ) | |
| 3 | **ಒಂದು ವರ್ಷದ ಅವಧಿಯಲ್ಲಿ ಉತ್ಪಾದಿಸಲಾದ**<br>**ಘನ ತ್ಯಾಜ್ಯದ ಒಟ್ಟು ಪ್ರಮಾಣ**<br>**(i) ಜೈವಿಕ** ವಿಘಟಿತ ತ್ಯಾಜ್ಯ<br>**(ii)**ಜೈವಿಕ ಅವಿಘಟಿತ ತ್ಯಾಜ್ಯ<br>**(iii)** ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯ (ನೈರ್ಮಲ್ಯ ತ್ಯಾಜ್ಯವನ್ನೂ ಒಳಗೊಂಡಂತೆ) | |
| 4 | **ಜೈವಿಕ ವಿಘಟಿತ ತ್ಯಾಜ್ಯವನ್ನು ಸ್ಥಳದಲ್ಲಿಯೇ ಸಂಸ್ಕರಿಸಲಾಗುತ್ತದೆಯೇ ಅಥವಾ ಇತರ ಯಾರೇ ವ್ಯಕ್ತಿಯಿಂದ ಸಂಸ್ಕರಿಸಲಾಗುತ್ತದೆಯೇ?** | **ಹೌದು/ಇಲ್ಲ** |
| 5 | **ಒಂದು ವೇಳೆ ಜೈವಿಕ ವಿಘಟಿತ ತ್ಯಾಜ್ಯವನ್ನು ಇತರ ಯಾರೇ ವ್ಯಕ್ತಿಯಿಂದ ಸಂಸ್ಕರಣಗೊಳಿಸಿದಲ್ಲಿ, ಅಂತಹ ವ್ಯಕ್ತಿಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ನಮೂದಿಸಿರಿ** | |
| 6. | **ಜೈವಿಕ ವಿಘಟಿತ ತ್ಯಾಜ್ಯವನ್ನು ಸಂಸ್ಕರಿಸಲು ಅಳವಡಿಸಿಕೊಳ್ಳಲಾದ ತಂತ್ರಜ್ಞಾನದ ವಿವರಗಳು** | |
| (i) | ಕಾಂಪೋಸ್ಟು ತಯಾರಿಕೆ | **ವರ್ಷದಲ್ಲಿ** ಉತ್ಪಾದಿಸಲಾದ ಕಾಂಪೋಸ್ಟಿನ ಪ್ರಮಾಣ<br>ವರ್ಷದಲ್ಲಿ ಉತ್ಪಾದಿಸಲಾದ ಉಳಿಕೆ ತ್ಯಾಜ್ಯದ ಪ್ರಮಾಣ |
| (ii) | ಜೈವಿಕ–ಮಿಥೆನೈಸೇಷನ್ | **ವರ್ಷದಲ್ಲಿ ಉತ್ಪಾದಿಸಲಾದ ಜೈವಿಕ ಅನಿಲದ ಪ್ರಮಾಣ**<br><br>ವರ್ಷದಲ್ಲಿ ಉತ್ಪಾದಿಸಲಾದ ಉಳಿಕೆ ತ್ಯಾಜ್ಯದ ಪ್ರಮಾಣ |
| (iii) | ಇತರ ಯಾವುದೇ ವಿಧಾನ | |
| 7 | ವರ್ಷದಲ್ಲಿ ಸಂಗ್ರಹಿಸಲಾದ ಜೈವಿಕ ಅವಿಘಟಿತ ತ್ಯಾಜ್ಯದ ಪ್ರಮಾಣ | |
| 8 | ಜೈವಿಕ ಅವಿಘಟಿತ ತ್ಯಾಜ್ಯದ ಸಂಸ್ಕರಣೆಯನ್ನು ನಿರ್ವಹಿಸುತ್ತಿರುವ ವ್ಯಕ್ತಿಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | |
| 9 | ಜೈವಿಕ ಅವಿಘಟಿತ ತ್ಯಾಜ್ಯವನ್ನು ನಿರ್ವಹಿಸುವ ಮತ್ತು ಸಂಸ್ಕರಿಸುವ ವಿಧಾನ/ರೀತಿ/ತಂತ್ರಜ್ಞಾನ (ತ್ಯಾಜ್ಯ ವ್ಯಾಪಾರಿಗಳಿಗೆ ಮಾರಾಟ/ಮರುಆವರ್ತನೆ/ಸಿಮೆಂಟು ಸ್ಥಾವರದಲ್ಲಿ ಸಹ–ಸಂಸ್ಕರಣೆ/ಇತರ ಯಾವುದೇ ವಿಧಾನ) ಮತ್ತು ಅಂತಹ ಸಂಸ್ಕರಣಾ ಸ್ಥಳಗಳ ಹೆಸರುಗಳು, ವಿಳಾಸಗಳು ಮತ್ತು ದೂರವಾಣಿ ಸಂಖ್ಯೆಗಳು | |
| 10 | ವರ್ಷವೊಂದಕ್ಕೆ ಸಂಗ್ರಹಿಸಲಾದ ಗೃಹೋತ್ಪಾದಿತ ಅಪಾಯಕಾರಿ | |

| | | |
|---|---|---|
| | ತ್ಯಾಜ್ಯದ ಪ್ರಮಾಣ(ನೈರ್ಮಲ್ಯ ತ್ಯಾಜ್ಯವೂ ಒಳಗೊಂಡಂತೆ) | |
| 11 | ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯದ (ನೈರ್ಮಲ್ಯ ತ್ಯಾಜ್ಯವೂ ಒಳಗೊಂಡಂತೆ)ಸಂಸ್ಕರಣೆಯನ್ನು ನಿರ್ವಹಿಸುತ್ತಿರುವ ವ್ಯಕ್ತಿಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | |
| 12 | ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯವನ್ನು ನಿರ್ವಹಿಸುವ ಮತ್ತು ಸಂಸ್ಕರಿಸುವ ವಿಧಾನ/ರೀತಿ/ತಂತ್ರಜ್ಞಾನ(ತ್ಯಾಜ್ಯ ವ್ಯಾಪಾರಿಗಳಿಗೆ ಮಾರಾಟ/ಮರುಆವರ್ತನೆ/ಸಿಮೆಂಟು ಸ್ಥಾವರದಲ್ಲಿ ಸಹ–ಸಂಸ್ಕರಣೆ/ಇತರ ಯಾವುದೇ ವಿಧಾನ) ಮತ್ತು ಅಂತಹ ಸಂಸ್ಕರಣಾ ಸ್ಥಳಗಳ ಹೆಸರುಗಳು, ವಿಳಾಸಗಳು ಮತ್ತು ದೂರವಾಣಿ ಸಂಖ್ಯೆಗಳು | |

## ಅನುಸೂಚಿ IV- ಬೃಹತ್ ತ್ಯಾಜ್ಯೋತ್ಪಾದಕನನ್ನು ಅಧಿಸೂಚಿಸುವ ಸಾರ್ವಜನಿಕ ನೋಟೀಸು

ಗ್ರಾಮ ಪಂಚಾಯತಿಯು ಈ ಮೂಲಕ ದಿನವೊಂದಕ್ಕೆ 50 ಕೆಜಿ ಅಥವಾ ಅದಕ್ಕೂ ಹೆಚ್ಚಿನ ಪ್ರಮಾಣದ ತ್ಯಾಜ್ಯವನ್ನು ಉತ್ಪಾದಿಸುವಂತಹವರೆಂದು(ಎಲ್ಲಾ ತ್ಯಾಜ್ಯ ಮೂಲಗಳಿಂದ) ಪರಿಭಾಷಿಸಲಾಗಿರುವ ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರುಗಳು ಗ್ರಾಮ ಪಂಚಾಯತಿಯು ಉಪವಿಧಿಗಳನ್ನು ಅನುಸೂಚಿಸಿದ ಈ ನೋಟೀಸು ಜಾರಿಯಾದ 60 ದಿನಗಳಿಗಿಂತ ವಿಳಂಬವಾಗದ ಅವಧಿಯೊಳಗೆ (---- ದಿನಾಂಕದೊಳಗೆ) ಸದರಿ ಉಪವಿಧಿಗಳ ಉಪಬಂಧಗಳನ್ನು ಮೂರು ವಿಧಗಳ ಘನತ್ಯಾಜ್ಯವನ್ನೂ ಸ್ಥಳದಲ್ಲಿಯೇ ವಿಂಗಡಿಸುವುದನ್ನೂ ಒಳಗೊಂಡಂತೆ (ಜೈವಿಕ ವಿಘಟಿತ, ಜೈವಿಕ ಅವಿಘಟಿತ, ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯಗಳನ್ನು(ನೈರ್ಮಲ್ಯ ತ್ಯಾಜ್ಯವೂ ಸೇರಿದಂತೆ) ಅನುಷ್ಠಾನಗೊಳಿಸಬೇಕೆಂದು ಮತ್ತು ವಿವಿಧ ವರ್ಗಗಳಿಗೆ ಸೇರಿದ ಜವಾಬ್ದಾರಿಯೂ ಸೇರಿದಂತೆ ಸ್ಥಳದಲ್ಲಿಯೇ ಜೈವಿಕ ವಿಘಟಿತ ತ್ಯಾಜ್ಯದ ಸಂಸ್ಕರಣೆಯನ್ನೂ ಸಹ ಮಾಡಬೇಇಕೆಂದು ನಿರ್ದೇಶಿಸುತ್ತದೆ. ವಿವರವಾದ ಸೂಚನೆಗಳು ------ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಉಪವಿಧಿಗಳಲ್ಲಿ ಲಭ್ಯವಿರುತ್ತದೆ.

ಬೃಹತ್ ತ್ಯಾಜ್ಯೋತ್ಪಾದಕರ ಪರಿಭಾಷೆಯ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ತ್ಯಾಜ್ಯೋತ್ಪಾದಕರುಗಳೂ ಸಹ ಅವರುಗಳು ನೋಟೀಸಿನ ಅವಧಿಯೊಳಗೆ ತಮ್ಮ ಆವರಣಗಳಿಂದ 50 ಕೆಜಿಗೂ ಕಡಿಮೆ ತ್ಯಾಜ್ಯವನ್ನು ಉತ್ಪಾದನೆ ಮಾಡುತ್ತಿರುವುದಾಗಿ ಸ್ವಯಂ ಘೋಷಣೆಯನ್ನು ಸಲ್ಲಿಸದ ಹೊರತು ಅವರುಗಳನ್ನು ಅಂತೆಯೇ ಪರಿಗಣಿಸಲಾಗುವುದು. ಅಂತಹ ಸ್ವಯಂ ಘೋಷಣೆಗಳು ಒಂದು ವೇಳೆ ಸತ್ಯವಲ್ಲವೆಂದು ಕಂಡು ಬಂದಲ್ಲಿ, ಪರಿಶೀಲನೆಗೆ ಮತ್ತು ದಂಡ ಮೊತ್ತ ವಸೂಲಾತಿಗೆ ಒಳಪಡತಕ್ಕದ್ದು. ಅಂತಹ ಸ್ವಯಂ ಘೋಷಣೆಯನ್ನು ಈ ನೋಟೀಸು ತಲುಪಿದ ದಿನಾಂಕದಿಂದ 20 ದಿವಸಗಳೊಳಗೆ (----- ದಿನಾಂಕದೊಳಗೆ) ಪರಿಶೀಲನೆಗೆ ಅನುವು ಮಾಡಿಕೊಡುವ ಸಲುವಾಗಿ ಸಲ್ಲಿಸತಕ್ಕದ್ದು. ನಿಗದಿತ ದಿನಾಂಕದ ನಂತರ ಕಳುಹಿಸಲಾದ/ಸಲ್ಲಿಸಲಾದ ಸ್ವಯಮ ಘೋಷಣೆಯನ್ನು ತಿರಸ್ಕರಿಸಲಾಗುವುದು.

ಈ ನೋಟೀಸಿನ 60 ದಿವಸಗಳ ನಂತರ (----ದಿನಾಂಕದ ನಂತರ) ಬೃಹತ್ ತ್ಯಾಜ್ಯೋತ್ಪಾದಕರಿಂದ ಉಪವಿಧಿಗಳ ಯಾವುದೇ ಉಲ್ಲಂಘನೆಯಾದಲ್ಲಿ ಅದು ಅನ್ವಯವಾಗುವ ದಂಡ ಮೊತ್ತವನ್ನು/ಜುಲ್ಮಾನೆಯನ್ನು ಗ್ರಾಮ ಪಂಚಾಯತಿಯ ಉಪವಿಧಿಗಳಲ್ಲಿ ತಿಳಿಸಿರುವಂತೆ ಆಕರ್ಷಿಸುತ್ತದೆ.

ಒಂದು ವೇಳೆ ಇನ್ನಾವುದೇ ಆ ನಂತರದ ದಿನಾಂಕದಂದು ಘೋಷಣೆಯು ಸುಳ್ಳೆಂದು ಕಂಡು ಬಂದಲ್ಲಿ, ಗ್ರಾಮ ಪಂಚಾಯತಿಗಳ ಉಪವಿಧಿಗಳನ್ವಯ ದಂಡನೆಯನ್ನು ಆಕರ್ಷಿಸುತ್ತದೆ.

ಸ್ಥಳ :

ಗ್ರಾಮ ಪಂಚಾಯತಿಯ ಪರಿವಾಗಿ ಅಧಿಕೃತ ಸಹಿದಾರ

## ಅನುಸೂಚಿ -V ವೈಯಕ್ತಿಕ (ವ್ಯಕ್ತಿಗತ) ನೋಟೀಸಿನ ನಮೂನೆ

**ಇವರಿಗೆ** (ಪ್ರಸ್ತಾವಿತ ಬೃಹತ್ ತ್ಯಾಜ್ಯೋತ್ಪಾದಕನ ಹೆಸರನ್ನು ಸೇರಿಸಿರಿ)

**ವಿಷಯ**: ಬೃಹತ್ ತ್ಯಾಜ್ಯೋತ್ಪಾದಕನಾಗಿ ವರ್ಗೀಕರಿಸುವ ಬಗ್ಗೆ

ತಮ್ಮ ಆವರಣದಲ್ಲಿ ಕೈಗೊಂಡಿರುವಂತಹ ಕಾರ್ಯಚಟುವಟಿಕೆಗಳು/ವ್ಯವಹಾರವನ್ನು ಮತ್ತು ತಮ್ಮಿಂದ ಉತ್ಪಾದಿಸಲಾಗುತ್ತಿರುವ ಘನ ತ್ಯಾಜ್ಯದ ಪ್ರಮಾಣವನ್ನು ಪರಿಗಣಿಸಿ ಗ್ರಾಮ ಪಂಚಾಯತಿಯು ತಮ್ಮನ್ನು **ಬೃಹತ್ ತ್ಯಾಜ್ಯೋತ್ಪಾದಕನೆಂದು** ಹೆಸರಿಸಿದೆ. ಅದರನ್ವಯ, ತಾವು ಈ ಉಪವಿಧಿಗಳ ಉಪಬಂಧಗಳನ್ನು ಪಾಲನೆ ಮಾಡತಕ್ಕದ್ದು ಮತ್ತು ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆಯನ್ನು, ಆವರಣದಲ್ಲಿಯೇ ವಿಂಗಡಣೆ ಮಾಡಿದ ತ್ಯಾಜ್ಯದ ದಾಸ್ತಾನು ಮತ್ತು ಜೈವಿಕ ವಿಘಟಿತ ತ್ಯಾಜ್ಯದ ಸಂಸ್ಕರಣೆಯನ್ನು ಆವರಣದಲ್ಲಿಯೇ ಹಾಗೂ ಈ ಉಪವಿಧಿಗಳಲ್ಲಿ ಒಳಗೊಂಡಿರುವಂತಹ ಇತರ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

ಒಂದು ವೇಳೆ ತಾವು ಬೃಹತ್ ತ್ಯಾಜ್ಯೋತ್ಪಾದಕರಲ್ಲವೆಂದು ಕ್ಲೇಮು ಮಾಡಿದಲ್ಲಿ, ತಾವು ಈ ಕುರಿತಂತೆ 20 ದಿವಸಗಳೊಳಗೆ ಒಂದು ಸ್ವಯಂ ಘೋಷಣೆಯನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ, ತಮ್ಮನ್ನು ಬೃಹತ್ ತ್ಯಾಜ್ಯೋತ್ಪಾದಕನೆಂದು ವರ್ಗೀಕರಿಸುವ ಬಗ್ಗೆ ತಮಗೆ ಯಾವುದೇ ಆಕ್ಷೇಪಣೆಯಿರುವುದಿಲ್ಲವೆಂದು ಪರಿಭಾವಿಸಲಾಗುವುದು. ಒಂದು ವೇಳೆ ತಮ್ಮ ಸ್ವಯಂ ಘೋಷಣೆಯು ಸತ್ಯವಲ್ಲವೆಂದು ಕಂಡು ಬಂದಲ್ಲಿ, ಅದನ್ನು ರದ್ದುಪಡಿಸಲಾಗುವುದು ಮತ್ತು ಉಪವಿಧಿಗಳನ್ವಯ ದಂಡನೆಯನ್ನು ವಿಧಿಸಲಾಗುವುದು.

-------------------

ಗ್ರಾಮ ಪಂಚಾಯತಿಯ ಪರವಾಗಿ ಅಧಿಕೃತ ಸಹಿದಾರ

## ಅನುಸೂಚಿ –VI (Schedule –VI)

### ಭಾರತೀಯ ರೂಪಾಯಿಗಳಲ್ಲಿ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕಗಳು

### PART A: SWM USER FEE FOR WASTE GENERATORS EXCEPT BULK WASTE GENERATORS

| ಕ್ರಮ ಸಂ; | ತ್ಯಾಜ್ಯೋತ್ಪಾದಕರ ವಿಧ | ಪ್ರತಿಯೊಬ್ಬ ತ್ಯಾಜ್ಯೋತ್ಪಾದಕನಿಂದ ಮಾಹೆಯಾನ ಬಳಕೆದಾರರ ಶುಲ್ಕವು ಕೆಳಕಂಡವುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ[1]. | | |
|---|---|---|---|---|
| | | **ಜನಸಂಖ್ಯೆ >=50 ಮತ್ತು <=500** | ಜನಸಂಖ್ಯೆ>=500 ಮತ್ತು <=2000 | ಜನಸಂಖ್ಯೆ >2000 |
| 1 | 200 ಚದರಡಿಗಳವರೆಗಿನ ಕಟ್ಟಿದ ಪ್ರದೇಶವನ್ನೊಳಗೊಂಡಿರುವಂತಹ ವಾಸದ ಮನೆಗಳು | **20** | 20 | 20 |
| 2 | 200 ಚದರಡಿಗಳನ್ನು ಮೀರಿದ ಆದರೆ 500 ಚದರಡಿಗಳವರೆಗೆ ಕಟ್ಟಿದ ಪ್ರದೇಶವನ್ನೊಳಗೊಂಡಿರುವ ವಾಸದ ಮನೆಗಳು | **30** | 30 | 30 |
| 3 | 500 ಚದರಡಿಗಳನ್ನು ಮೀರಿ ಕಟ್ಟಿದ ಪ್ರದೇಶವನ್ನೊಳಗೊಂಡ ವಾಸದ ಮನೆಗಳು | **40** | 50 | 60 |
| 4 | 200 ಚದರಡಿಗಳಿಗಿಂತ ಕಡಿಮೆ ಪ್ರದೇಶವನ್ನು ಹೊಂದಿರುವ 50 ಕೆಜಿಗಿಂತಲೂ ಕಡಿಮೆ ಪ್ರಮಾಣದ ಸಣ್ಣ ವಾಣಿಜ್ಯ ಸ್ಥಾಪನೆಗಳು, ಅಂಗಡಿಗಳು ಮತ್ತು ಉಪಹಾರ ಗೃಹ(ಎಂದರೆ ಹೋಟೆಲುಗಳು, ಧಾಬಾಗಳು, ಮೆಸ್‌ಗಳು, ಉಪಹಾರ ಮಂದಿರಗಳು ಕ್ಯಾಂಟೀನುಗಳು ಮತ್ತು ಸಿಹಿತಿನಿಸಿನ ಅಂಗಡಿಗಳು) | **60** | 75 | 90 |
| 5 | ದೊಡ್ಡ ಮಳಿಗೆಗಳು, ವಾಣಿಜ್ಯ ಸ್ಥಾಪನೆಗಳು ಮತ್ತು ಉಪಹಾರ ಗೃಹಗಳು(ಎಂದರೆ 200ಚದರಡಿಗಳನ್ನು ಮೀರಿದ ಮತ್ತು 50 ಕೆಜಿಗಳಿಗಿಂತ ಕಡಿಮೆ ಘನ ತ್ಯಾಜ್ಯವನ್ನು ಉತ್ಪಾದನೆ ಮಾಡುವಂತಹ ಹೋಟೆಲುಗಳು, ಧಾಬಾಗಳು, ಮೆಸ್‌ಗಳು, ಉಪಹಾರ ಮಂದಿರಗಳು ಕ್ಯಾಂಟೀನುಗಳು ಮತ್ತು ಸಿಹಿತಿನಿಸಿನ ಅಂಗಡಿಗಳು) | **100** | 150 | 200 |

[1] The SWM User Fees shall be reduced by 50% in the event the Waste Generator processes its entire Biodegradable Waste by itself and does not use the services of the gram panchayat

| | | | | |
|---|---|---|---|---|
| 6 | 1000 ಚದರಡಿಯೊಳಗಿನ ಸ್ಥಳವನ್ನು ಹೊಂದಿರುವ ಮತ್ತು 50 ಕೆಜಿಗಿಂತ ಕಡಿಮೆ ಘನತ್ಯಾಜ್ಯವನ್ನು ಉತ್ಪಾದನೆ ಮಾಡುವ ಅತಿಥಿ ಗೃಹಗಳು, ಲಾಡ್ಜುಗಳು, ಧರ್ಮಶಾಲೆಗಳು | **150** | 200 | 250 |
| 7 | 20 ಹಾಸಿಗೆಗಳವರೆಗಿನ ಸೌಲಭ್ಯವನ್ನು ಹೊಂದಿರುವ ಆಸ್ಪತ್ರೆಗಳು, ಔಷಧಾಲಯಗಳು ಮತ್ತು ಔಷಧವಿತರಣಾ ಕೇಂದ್ರಗಳು | **110** | 130 | 150 |
| 8 | 20 ಹಾಸಿಗೆಗಳಿಗಿಂತ ಹೆಚ್ಚಿನ ಸೌಲಭ್ಯವನ್ನು ಹೊಂದಿರುವ ಆಸ್ಪತ್ರೆಗಳು, ಔಷಧಾಲಯಗಳು ಮತ್ತು ಔಷಧ ವಿತರಣಾ ಕೇಂದ್ರಗಳು | **200** | 300 | 500 |
| 9 | ಸಣ್ಣ ಮತ್ತು ಗುಡಿ ಕೈಗಾರಿಕಾ ಘಟಕಗಳು(ಅಪಾಯಕಾರಿ ರಹಿತವಾದ ಘಟಕಗಳು ಮಾತ್ರ) ಮತ್ತು ದಿನವೊಂದಕ್ಕೆ 50 ಕೆಜಿಗಿಂತ ಕಡಿಮೆ ಘನ ತ್ಯಾಜ್ಯವನ್ನು ಉತ್ಪಾದನೆ ಮಾಡುವ ಕೇಂದ್ರಗಳು | **200** | 250 | 300 |
| 10 | ಪ್ರತಿ ದಿನವೂ 50 ಕೆಜಿಗಿಂತ ಕಡಿಮೆ ತ್ಯಾಜ್ಯವನ್ನು ಉತ್ಪಾದಿಸುವಂತಹ ತರಕಾರಿ ಮತ್ತು ಇತರ ಮಾರುಕಟ್ಟೆಗಳು | **150** | 200 | 250 |
| 11 | ಪ್ರತಿ ದಿನವೂ 50 ಕೆಜಿಗಿಂತ ಕಡಿಮೆ ತ್ಯಾಜ್ಯವನ್ನು ಉತ್ಪಾದನೆ ಮಾಡುವ ಶಾಲೆಗಳು, ಕಾಲೇಜುಗಳು, ಪೂಜಾಸ್ಥಳಗಳು, ಪ್ರವಾಸಿ ಆಕರ್ಷಕ ಕೇಂದ್ರಗಳು ಇತ್ಯದಿಗಳಂತಹ ಸಂಸ್ಥೆಗಳು | **200** | 250 | 300 |
| 12 | ಮೇಲಿನ ಯಾವುದೇ ವರ್ಗದಡಿಗೆ ಬಾರದಂತಹ ಇತರ ಸ್ಥಳಗಳು/ಚಟುವಟಿಕೆಗಳು | **ಗ್ರಾಮಪಂಚಾಯತಿಯು ಒಂದು ಸಾಮಾನ್ಯ ಅಥವಾ ವಿಶೇಷ ಆದೇಶ/ ಅಧಿಸೂಚನೆಯ ಮೂಲಕ ತೀರ್ಮಾನಿಸಿದಂತೆ** | **ಗ್ರಾಮಪಂಚಾಯತಿಯು ಒಂದು ಸಾಮಾನ್ಯ ಅಥವಾ ವಿಶೇಷ ಆದೇಶ/ ಅಧಿಸೂಚನೆಯ ಮೂಲಕ ತೀರ್ಮಾನಿಸಿದಂತೆ** | **ಗ್ರಾಮಪಂಚಾಯತಿಯು ಒಂದು ಸಾಮಾನ್ಯ ಅಥವಾ ವಿಶೇಷ ಆದೇಶ/ ಅಧಿಸೂಚನೆಯ ಮೂಲಕ ತೀರ್ಮಾನಿಸಿದಂತೆ** |

--------

## PART B: SWM USER FEE FOR BULK WASTE GENERATOR

| ಕ್ರಮ ಸಂ; | ತ್ಯಾಜ್ಯೋತ್ಪಾದಕರ ವಿಧ | ಪ್ರತಿಯೊಬ್ಬ ತ್ಯಾಜ್ಯೋತ್ಪಾದಕನಿಂದ ಮಾಹೆಯಾನ ಬಳಕೆದಾರರ ಶುಲ್ಕವು ಕೆಳಕಂಡವುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ[2]. | | |
|---|---|---|---|---|
| | | **ಜನಸಂಖ್ಯೆ >=50 ಮತ್ತು <=500** | ಜನಸಂಖ್ಯೆ>=500 ಮತ್ತು <=2000 | ಜನಸಂಖ್ಯೆ >2000 |
| 1. | ತರಕಾರಿ ಮತ್ತಿತರ ಮಾರುಕಟ್ಟೆಗಳು | **200** | 250 | 300 |
| 2 | 1000 ಚದರಡಿಗಳನ್ನು ಮೀರಿದ ವಿಸ್ತೀರ್ಣದ ವಸತಿ ಗೃಹಗಳು, ಲಾಡ್ಜುಗಳು ಮತ್ತು ಧರ್ಮಶಾಲೆಗಳು | **200** | 300 | 500 |
| 3 | ದೊಡ್ಡ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆಗಳು | **300** | 500 | 700 |
| 4 | ಶಾಲೆಗಳು, ಕಾಲೇಜುಗಳಂತಹ ಸಂಸ್ಥೆಗಳು, ಪೂಜಾಸ್ಥಳಗಳು ಮತ್ತು ಪ್ರವಾಸಿ ಆಕರ್ಷಕ ಕೇಂದ್ರಗಳು ಇತ್ಯಾದಿ | **300** | 500 | 700 |
| 5 | ಪ್ರತಿ ಸಮಾರಂಭಕ್ಕೆ 1000ಚದರಡಿಗಳನ್ನು ಮೀರುವಂತಹ ವಿವಾಹ ಮಂಟಪಗಳು ಮತ್ತು ಹಬ್ಬ ಆಚರಣೆ ಕೇಂದ್ರಗಳು | **1200** | 1500 | 2000 |
| 6 | ಆಸ್ಪತ್ರೆಗಳು, ಔಷಧಾಲಯಗಳು ಮತ್ತು ನರ್ಸಿಂಗ್ ಹೋಮುಗಳು(20 ಹಾಸಿಗೆಗಳನ್ನು ಮೀರಿದ) | **300** | 500 | 700 |
| 7 | ದಿನವೊಂದಕ್ಕೆ 50 ಕೆಜಿಗಿಂತಲೂ ಅಧಿಕ ಘನ ತ್ಯಾಜ್ಯವನ್ನು ಉತ್ಪಾದನೆ ಮಾಡುತ್ತಿರುವ ಗುಡಿ ಕೈಗಾರಿಕಾ ಘಟಕಗಳು, ಕಾರ್ಖಾನೆಗಳು ಮತ್ತು ಅಂತಹ ಘಟಕಗಳು | **300** | 500 | 700 |

-------

[2] The SWM User Fees shall be reduced by 50% in the event the Bulk Waste Generator processes its entire Biodegradable Waste by itself and does not use the services of the gram panchayat.
The SWM User Fees shall be reduced by 40% in the event the Bulk Waste Generator deposits segregated Solid Waste at the Bio-degradable Waste processing unit and the DWCCsby itself and does not use the transportation provided by the gram panchayat.

## ಅನುಸೂಚಿ –VII (Schedule –VII)
## ಜುಲ್ಮಾನೆಗಳು ಮತ್ತು ದಂಡಗಳು

| ಕ್ರಮ ಸಂ. | **ಅನುಪಾಲನೆ** ಮಾಡದಿರುವುದು ಮತ್ತು ತ್ಯಾಜ್ಯೋತ್ಪಾದಕನ ವಿಧ | **ದಂಡವು ಕೆಳಕಂಡವುಗಳಿಗಿಂತ(ಐಎನ್‌ಆರ್‌ನಲ್ಲಿ) ಕಡಿಮೆ ಇರತಕ್ಕದ್ದಲ್ಲ.** | | |
|---|---|---|---|---|
| | | **ಜನಸಂಖ್ಯೆ >=50 ಮತ್ತು <=500** | ಜನಸಂಖ್ಯೆ>=500 ಮತ್ತು <=2000 | ಜನಸಂಖ್ಯೆ >2000 |
| **1** | ತೆರೆದ ಸ್ಥಳಗಳಲ್ಲಿ ಕಸ ಸುರಿಯುವುದು, ಉಗಿಯುವುದು ಮತ್ತು ಮೂತ್ರವಿಸರ್ಜನೆ | **500** | 700 | 1000 |
| **2** | ಬೃಹತ್ ತ್ಯಾಜ್ಯೋತ್ಪಾದಕರು ಘನ ತ್ಯಾಜ್ಯ ವಿಂಗಡಣೆ ಮಾಡಲು ವಿಫಲರಾಗಿದ್ದಲ್ಲಿ | **2000** | 3000 | 5000 |
| **3** | ಬೃಹತ್ ತ್ಯಾಜ್ಯೋತ್ಪಾದಕರಲ್ಲದ ತ್ಯಾಜ್ಯೋತ್ಪಾದಕರಿಂದ ಘನತ್ಯಾಜ್ಯವನ್ನು ವಿಂಗಡಣೆ ಮಾಡಿಸುವಲ್ಲಿ ಮತ್ತು /ಅಥವಾ ತ್ಯಾಜ್ಯವನ್ನು ಬಟವಾಡೆ ಮಾಡುವಲ್ಲಿನ ವೈಫಲ್ಯ | **500** | 700 | 1000 |
| **4** | ಬೃಹತ್ ತ್ಯಾಜ್ಯೋತ್ಪಾದಕನಿಂದ ಘನ ತ್ಯಾಜ್ಯದ ಸುಡುವಿಕೆ, ಅಥವಾ ಕುಪ್ಪೆ ಹಾಕುವಿಕೆ ಮತ್ತು/ಅಥವಾ ಹೂಳುವ ಮೂಲಕ ವಿಲೇವಾರಿ | **2000** | 3000 | 5000 |
| **5** | ಬೃಹತ್ ತ್ಯಾಜ್ಯೋತ್ಪಾದಕನಲ್ಲದ ತ್ಯಾಜ್ಯೋತ್ಪಾದಕನಿಂದ ತ್ಯಾಜ್ಯದ ಸುಡುವಿಕೆ, ಅಥವಾ ಕುಪ್ಪೆ ಹಾಕುವಿಕೆ ಮತ್ತು/ಅಥವಾ ಹೂಳುವ ಮೂಲಕ ವಿಲೇವಾರಿ | **500** | 700 | 1000 |
| **6** | ಬೃಹತ್ ತ್ಯಾಜ್ಯೋತ್ಪಾದಕನಿಂದ ಸುಳ್ಳು ಘೋಷಣೆ | **2000** | 3000 | 5000 |
| **7** | ಮೇಲಿನ ಯಾವುದೇ ವರ್ಗದಡಿಗೆ ಬಾರದಂತಹ ಇತರ ಸ್ಥಳಗಳು/ಚಟುವಟಿಕೆಗಳು | **ಗ್ರಾಮಪಂಚಾಯತಿಯು ಒಂದು ಸಾಮಾನ್ಯ ಅಥವಾ ವಿಶೇಷ ಆದೇಶ/ ಅಧಿಸೂಚನೆಯ ಮೂಲಕ ತೀರ್ಮಾನಿಸಿದಂತೆ** | **ಗ್ರಾಮಪಂಚಾಯತಿಯು ಒಂದು ಸಾಮಾನ್ಯ ಅಥವಾ ವಿಶೇಷ ಆದೇಶ/ ಅಧಿಸೂಚನೆಯ ಮೂಲಕ ತೀರ್ಮಾನಿಸಿದಂತೆ** | **ಗ್ರಾಮಪಂಚಾಯತಿಯು ಒಂದು ಸಾಮಾನ್ಯ ಅಥವಾ ವಿಶೇಷ ಆದೇಶ/ ಅಧಿಸೂಚನೆಯ ಮೂಲಕ ತೀರ್ಮಾನಿಸಿದಂತೆ** |

*******